
ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

# ಕಲ್ಯಾಣ ಕಿರಣ

ಮೇ 2016

ಶರಣರ ನಡೆ ಮುಕ್ತಿಯ ಕಡೆ

ಜೂನ್
26ರಂದು
ಬೆಂಗಳೂರು
ಬಸವ
ಗಂಗೋತ್ರಿಯಲ್ಲಿ
7ನೇ
ಬಸವೋತ್ಸವ



http://kalyanakirana.over-blog.com/ ಬ್ಲಾಗ್





ಬಸವ ಜಯಂತಿ

ಸುಮಧುರ ಕ್ಷಣಗಳು





## ಶರಣು ಶರಣಾರ್ಥಿ

ಪಡೆವುದರಿದು ನರಜನ್ಮವ,
ಪಡೆವುದರಿದು ಹರಭಕ್ತಿಯ,
ಪಡೆವುದರಿದು ಗುರುಕಾರುಣ್ಯವ,
ಪಡೆವುದರಿದು ಲಿಂಗ ಜಂಗಮ ಸೇವೆಯ
ಪಡೆವುದರಿದು ಸತ್ಯಶರಣರ ಅನುಭಾವವ.
ಇಂತಾಗಿ ಚೆನ್ನಮಲ್ಲಿಕಾರ್ಜುನದೇವರ
ದೇವಯ್ಯನ ಶರಣರ ಅನುಭಾವದಲ್ಲಿ
ನಲಿನಲಿದಾಡು ಕಂಡೆಯಾ ಎಲೆಮನವೆ.!

– ಅಕ್ಕ ಮಹಾದೇವಿ

## ಮೇ-ಜೂನ್

### ಹಬ್ಬ, ಹುಣ್ಣಿಮೆಗಳು

ಮೇ–21, 23, 23: ಧಾರವಾಡದಲ್ಲಿ ಶರಣೋತ್ಸವ

ಜೂನ್–26: ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವೋತ್ಸವ


ಜೂನ್–30: ಪೂಜ್ಯಶ್ರೀ ಮಹಾ ಜಗದ್ಗುರು ಲಿಂಗಾನಂದ ಸ್ವಾಮೀಜಿ ಲಿಂಗೈಕ್ಯ ಸಂಸ್ಮರಣೆ

ಸಂಪಾದಕೀಯ
ಪೂಜ್ಯ ಶ್ರೀ ಡಾ. ಮಾತೆ ಮಹಾದೇವಿ,
ಪೂಜ್ಯ ಶ್ರೀ ಮಾತೆ ಕಸ್ತೂರಿ ದೇವಿ,
ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿ.
ಅಕ್ಷರ ಜೋಡಣೆ
ಬಸವ ಚಂದ್ರಿಕಾ
ಪುಟ ವಿನ್ಯಾಸ
ಪುನೀತ್.ಎಂ.ಜಿ.
ಪ್ರಸಾರ ಮೇಲ್ವಿಚಾರಣೆ
ಆರ್.ಎಸ್.ಹೊನ್ನಪ್ಪನವರ್

ಒಂದು ಪ್ರತಿಗೆ: 20 ರೂಪಾಯಿ
ಪಂಚವಾರ್ಷಿಕ ಸದಸ್ಯತ್ವ : 1000 ರೂಪಾಯಿ
ವಾರ್ಷಿಕ ಚಂದಾ : 200 ರೂಪಾಯಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ – 47 ಬಸವ ಶಕೆ 882
ಸಂಚಿಕೆ – 05 ಮೇ 2016






**Kalyana Kirana**-R.No.19988/70. Monthly Magzine Edited and published by Pujya kasthuridevi on behalf of Vishva Kalyana Mission chratible trust, Basava Mantapa, 2035, 20th main, 2nd block, Rajajinagar Bangalore -560010.

**Ph: 080-23131476. SMS-9945806297.**
**E-mail: kalyanakirana1970@gmail.com**

# ಸಂಪಾದಕರ ನುಡಿ

ಮಾತಾಜಿ



## 12-21ನೇ ಶತಮಾನ

"ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು ಕರ್ತನಟ್ಟಿದನಯ್ಯಾ ಬಸವಣ್ಣನ"

ಸಾವಿರಾರು ವರುಷಗಳಿಂದ ಸಮಾಜದಲ್ಲಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಶೋಷಣಗೆ ಒಳಗಾಗಿದ್ದ ಜನಮನವನ್ನು ಉದ್ಧರಿಸಲೋಸುಗ ಸೃಷ್ಟಿಕರ್ತನು ಸರ್ವಾಂಗ ಪರಿಪೂರ್ಣವಾದ ವ್ಯಕ್ತಿತ್ವವನ್ನೊಳಗೊಂಡ ಒಂದು ಅದ್ಭುತವಾದ ಪ್ರಭೆಯನ್ನು ಭೂಮಿಗೆ ಕಳುಹಿಸಿಕೊಟ್ಟನು. ಅವರೇ ಗುರು ಬಸವಣ್ಣನವರು.

ಸೃಷ್ಟಿಕರ್ತನ ಆಜ್ಞೆ ಹೊತ್ತು ಬಂದ ಧರ್ಮಪಿತ ಬಸವೇಶ್ವರರು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಸುಂದರ-ಸುಮಧುರ-ಅದ್ಭುತ ಪರಿಕಲ್ಪನೆಯನ್ನು ಹೊಂದಿದ ಲಿಂಗಾಯತ ಧರ್ಮವೊಂದನ್ನು ಕೊಡಮಾಡಿದರು.

ಸಾವಿರಾರು ವರುಷಗಳಿಂದ ರೂಢಿಗೊಂಡು ಬಂದ ಮೂಢ ಸಂಪ್ರದಾಯಕ್ಕೆ, ಪಟ್ಟಭದ್ರಹಿತಾಸಕ್ತಿಗೆ, ಸ್ತ್ರೀ-ಪುರುಷರೆಂಬ ಭೇದ ಭಾವಕ್ಕೆ ಹಲವು ದೇವತೋಪಾಸನೆಗೆ ಅಂತ್ಯ [redacted] ಹಾಡಿದರು.

ವೈಚಾರಿಕತೆಯಿಂದ ವೈಜ್ಞಾನಿಕತೆಯಿಂದ, ಆತ್ಮ ವಿಮರ್ಷೆಯಿಂದ ಕೂಡಿದ ವಾಕ್, ಆಚಾರ, ವಿಚಾರ ಸ್ವಾತಂತ್ರ್ಯವನ್ನು ಮುಕ್ತವಾಗಿ ಅನುಭವಮಂಟಪದ ಮುಖಾಂತರ ಕೊಡಮಾಡಿದರು.

ಇದರ ಪ್ರತಿಫಲವಾಗಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ, ಆಫಘಾನಿಸ್ತಾನ ದಿಂದ ಬಂಗಾಲದವರೆಗಿನ ಸತ್ಯದ ಸಾಧಕರು, ಶೋಧಕರು, ಹರಿಜನನಿಂದ ಹಾರುವನವರೆಗೆ ಕಲ್ಯಾಣಕ್ಕೆ ಧಾವಿಸಿ ಬಂದರು. ಅವರಿಗೆ ಇಷ್ಟಲಿಂಗ ದೀಕ್ಷೆಯ ಮುಖಾಂತರ ಧರ್ಮದ ಅನುಯಾಯಿಯನ್ನಾಗಿ ಪರಿವರ್ತಿಸಿ, ಕಡ್ಡಾಯವಾಗಿ ಕಾಯಕ ಮಾಡಲಿಕ್ಕೆ ಹಚ್ಚಿ, ಪ್ರತಿನಿತ್ಯ ಆತ್ಮಾವಲೋಕನಕ್ಕೆ ಅನುಭವ ಮಂಟಪದಲ್ಲಿ ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಅನುಭವವನ್ನು ಹಂಚಿಕೊಂಡುದರ ಫಲವಾಗಿ ವಚನ ಸಾಹಿತ್ಯವೆಂಬ ಜೇನುತುಪ್ಪ ಹೊರಹೊಮ್ಮಿತು.





ಆ ಮಾಧುರ್ಯಮಯ ವಚನಸಾಹಿತ್ಯ ಜನಮನ ಬೆಳಗಿತು. ಕಲ್ಯಾಣದಲ್ಲಿ ನೀಡುವವರುಂಟು ಬೇಡುವರಿಲ್ಲ ಎನ್ನುವಂತಾಗಿ, ಧರ್ಮಪಿತ ಬಸವಣ್ಣನವರು ಕಾಯಕದ ಹಾಲಿನ ಹೊಳೆಯಲ್ಲಿ ದಾಸೋಹದ ತೆಪ್ಪ ತೇಲುವಂತಹ ಸಮೃದ್ಧಿ ಸಾಧಿಸಿದರು. ಭ್ರಷ್ಟಾಚಾರವಿಲ್ಲದ ಸರ್ವ ಸಮಾನತೆಯ ಕಲ್ಯಾಣ ರಾಜ್ಯ ಕಟ್ಟಿ ತೋರಿಸಿದರು. ಕೈಲಾಸ ಸ್ವರ್ಗ ಅಂತಾ ಕಲ್ಪನೆಯ ಕನಸಿನಲ್ಲಿ ಮುಳುಗಿದ್ದ ಜನರ ಭ್ರಾಂತಿ ಹೊಡೆದೋಡಿಸಿದರು.

ಲಿಂಗಾಯತ ಧರ್ಮದ ದೀಕ್ಷೆ ನೀಡಿ ಬ್ರಾಹ್ಮಣ ಮಧುವರಸನ ಮಗಳನ್ನು ಸಮಗಾರ ಹರಳಯ್ಯನ ಮಗ ಶೀಲವಂತನಿಗೆ ಅಲ್ಲಮಪ್ರಭುದೇವರ ದಿವ್ಯ ಸಾನಿಧ್ಯದಲ್ಲಿ, 770 ಅಮರ ಗಣಂಗಳ ದಿವ್ಯ ಸಮ್ಮುಖದಲ್ಲಿ, 1,96,000 ಅನುಯಾಯಿ ಶರಣ ಶರಣೆಯರ ಸಾಕ್ಷಿಯಾಗಿ ಮದುವೆ ಮಾಡಿಸಿದರು. "ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ, ಇವನಮ್ಮವ ಇವನಮ್ಮವ ಇವನಮ್ಮವನೆಂದೆನಿಸಯ್ಯಾ, ಲಿಂಗದೇವಾ ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ" ಎಂದು ಸರ್ವ ಸಮಾನತೆಯ ಧ್ವಜವನ್ನು ಆಗಸದೆತ್ತರಕ್ಕೆ ಹಾರಿಸಿದರು.

ಈ 12ನ್ನು ತಿರುವುಮುರುವು ಮಾಡಿದರೆ 21 ಆಗುತ್ತದೆ. 12 ಹಾಗೂ 21ನೇ ಶತಮಾನ ಹೋಲಿಸಿದಾಗ 900 ವರ್ಷಗಳ ದೀರ್ಘ ಪಯಣ ಕ್ರಮಿಸಿದ ನಂತರ 21ನೇ ಶತಮಾನದಲ್ಲಿ 12ನೇ ಶತಮಾನ ಮತ್ತೆ ಬಂದಂತೆ ಭಾಸವಾಗುವುದು.

ಸರ್ವಜ್ಞನ ಕಾಲಜ್ಞಾನದ ವಚನದಂತೆ
"ಬಸವ ಪೀಠವು ಎದ್ದು| ವಸೆದು ನಾಣ್ಯವು ಹುಟ್ಟಿ । ಬಸವನ ಮುದ್ರೆ ಮರೆದಾವು ।
ಧರೆ ಅವಗೆ ವಶವಾಗದಿಹುದೇ ಸರ್ವಜ್ಞ? ।

ಎಂಬುದನ್ನು ಅವಲೋಕಿಸಿದಾಗ 1987 ರಲ್ಲಿ ಕೂಡಲಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮಪೀಠ ಸ್ಥಾಪನೆಯಾಗಿ 1988 ರಿಂದ "ಶರಣಮೇಳ"ವೆಂಬ ಬೃಹತ್ ಶರಣ ಸಮಾವೇಶ ಪ್ರಾರಂಭವಾಯಿತು.

21ನೇ ಶತಮಾನದಲ್ಲಿ ವಚನ ಸಾಹಿತ್ಯವನ್ನು ಹೊತ್ತು ಎಲ್ಲ ಕಡೆಗೆ ಚದುರಿ ಹೋದ ಶರಣ ಸಮಾಜವನ್ನು ಒಂದುಗೂಡಿಸಲು ಪ್ರಯತ್ನಿಸಿ ಕರ್ನಾಟಕದ ಮೂಲೆಮೂಲೆಗೂ, ಮಹಾರಾಷ್ಟ್ರ, ಆಂಧ್ರನಾಡು, ತೆಲಂಗಾಣ, ತಮಿಳುನಾಡು, ದೆಹಲಿ, ಗೋವಾ ಇದಲ್ಲದೆ, ಇಂಗ್ಲೆಂಡ್, ಅಮೇರಿಕದಂತಹ ವಿದೇಶಗಳಲ್ಲಿಯೂ ವಚನ ಧರ್ಮ ಪ್ರಚಾರ ಕಾರ್ಯವನ್ನು ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು, ಹಲವಾರು ಮಹಾನ್ ಶರಣರು ಮಾಡಿದ್ದಾರೆ.

2016ರ 883ನೇ "ಬಸವ ಜಯಂತಿ" ಆಚರಣೆ ಗಮನಿಸಿದಾಗ ಭಾರತ ದೇಶದ ತುಂಬ ಹಾಗೂ ಇಂಗ್ಲೆಂಡ್, ಅಮೇರಿಕಾದಂತಹ ಇನ್ನೂ ಹಲವಾರು ದೇಶಗಳಲ್ಲಿ ಬಸವ ಜಯಂತಿ ಸಂಭ್ರಮದಿಂದ ನಡೆಯಿತು.

ಇದಕ್ಕೆ ಪೂರಕವಾಗಿ 2015ರ ನವಂಬರ್ 14ರಂದು ಭಾರತ ದೇಶದ ನೆಚ್ಚಿನ ಪ್ರಧಾನಮಂತ್ರಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಲಂಡನ್ ಪಟ್ಟಣದ ಥೇಮ್ಸ್ ನದಿದಂಡೆ, ಸಂಸತ್ ಭವನದ ಮುಂದೆ ವಿಶ್ವಗುರು ಬಸವಣ್ಣನವರ ಪುತ್ಥಳಿ ಲೋಕಾರ್ಪಣೆ ಮಾಡಿದರು. ಇದನ್ನು ನಾವೆಲ್ಲರು ಹೆಮ್ಮೆಯಿಂದ ಸ್ವೀಕರಿಸಬೇಕು. ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದಾಗ 21ನೇ ಶತಮಾನದಲ್ಲಿ 12ನೇ ಶತಮಾನದ (ಬಸವಯುಗ) ಬಸವಣ್ಣನವರ ತತ್ವಾದರ್ಶಗಳು ಭೂಮಿಯಾದ್ಯಂತ ಹರಡುತ್ತಿವೆ, ಅದನ್ನು ಎಲ್ಲರೂ ಮುಕ್ತ ಮನಸ್ಸಿನಿಂದ ಸ್ವೀಕರಿಸುತ್ತಿದ್ದಾರೆ ಎಂಬುದು ಕಾಣುತ್ತಿದೆ. 21ನೇ ಶತಮಾನದಲ್ಲಿ 21ನೇ ಶತಮಾನದಲ್ಲಿ 12ನೇ ಶತಮಾನ (ಬಸವಯುಗ) ಪುಟ್ಟಿಬರುತ್ತಿದೆ ಎಂಬುದರಲ್ಲಿ ಸಂಶಯವೇ ಇಲ್ಲ.

# ಅಕ್ಕನ ಅಮರವಾಣಿ ಭಾಗ-29



## 327. ಜ್ಯೋತಿ ದರ್ಶನ

ಸಂಸಾರವ ನಿರ್ವಾಣವ ಮಾಡಿ, ಮನವ
ವಜ್ರತುರಗವ ಮಾಡಿ, ಜೀವನ ರಾವುತನ
ಮಾಡಿ, ಮೇಲಕ್ಕೆ ಉಪ್ಪರಿಸಲೀಯದೆ,
ಮುಂದಕ್ಕೆ ಮಗ್ಗರಿಸಲೀಯದೆ
ಈ ವಾರುವನ ಹಿಂದಕ್ಕೆ ಬರಸೆಳೆದು ನಿಲಿಸಿ,
ಮೋಹರವಾಗಿದ್ದ ದಳದ ಮೇಲೆ
ಅಟ್ಟಿ ಮುಟ್ಟಿ ತಿವಿದು ಹೊಯಿದು
ನಿಲಿಸಲರಿಯದೆ,
ಧವಳಬಣ್ಣದ ಕೆಸರುಗಲ್ಲ ಮೆಟ್ಟಿ
ತೊತ್ತಳದುಳಿವುತ್ತಲು ಇದಾರಯ್ಯಾ
ಅಂಗಡಿಯ ರಾಜಬೀದಿಯೊಳಗೆ ಬಿದ್ದ ರತ್ನಸೆಟ್ಟಿ
ಈ ಥಳಥಳನೆ ಹೊಳೆವ ಪ್ರಜ್ವಲಿತವ ಕಾಣದೆ
ಹಳಹಳನೆ ಹಳಸುತ್ತೈದಾರೆ ಅಯ್ಯಾ
ಆಧಾರಸ್ಥಾನದ ಧೂಪಗುಂಡಿಯ ಮೇಲೆ
ಹೃದಯಸ್ಥಾನದ ಇಂಗಳವನಕ್ಕಿ
ವಾಯುಪವನದಿಂದ ನಿಲಿಸಲು,
ಆ ಅಗ್ನಿಯ ಸೆಕೆ ಹೋಗಿ ಬ್ರಹ್ಮರಂಧ್ರವ
ಮುಟ್ಟಲು, ಅಲ್ಲಿರ್ದ ಅಮೃತದ ಕೊಡನೊಡೆದು
ಕೆಳಗಣ ಹೃದಯಸ್ಥಾನದ ಮೇಲೆ ಬೀಳಲ್ಕೆ,
ಮರಸಿದ ಮಾಣಿಕ್ಯದ ಬೆಳಗು ಕಾಣಬಹುದು.
ಇದನಾರಯ್ಯಾ ಬಲ್ಲರು; ಹಮ್ಮಳಿಸಿದ
ಶರಣರ ಮೇಲೆ? ಇಹಪರವ ಬಲ್ಲ ಶರಣ,
ಪಂಚೇಂದ್ರಿಯದ ಇಂಗಿತವ ಬಲ್ಲ ಶರಣ.
ಒಡಲ ಬಿಟ್ಟ ಶರಣನಲ್ಲದೆ ಉಳಿದ ಪ್ರಾಣ-
ಘಾತಕ ಪಾತಕರಿವರೆತ್ತಲು?
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ,
ನಿಮ್ಮ ಶರಣ ಬಸವಣ್ಣಂಗಲ್ಲದೆ?

ಸಂಸಾರವ ಅಂದರೆ ನಾನು ನನ್ನದು, ನನ್ನಿಂದ, ನನಗಾಗಿ ಎಂಬ ನಾನಿನ ಸರಪಳಿಯನ್ನು ನಿವಾರಿಸಿಕೊಂಡು, ಮನಸ್ಸನ್ನು ಗಟ್ಟಿಗೊಂಡ (ಧೈರ್ಯಶಾಲಿಯಾದ) ಕುದುರೆಯನ್ನಾಗಿ ಮಾಡಿ, ಜೀವಾತ್ಮನನ್ನೆ ಸವಾರರನ್ನಾಗಿ ಮಾಡಬೇಕು. ಈ ಜೀವಾತ್ಮವು ಒಂದು ಕ್ರಮದಲ್ಲಿ ಬೆನ್ನುಹುರಿ, ಸುಷುಮ್ನಾ ನಾಡಿಯ ಮೂಲಕ ಮುಂದಕ್ಕೆ ಸಾಗಬೇಕು. ಇದು ಒಂದು ಚಕ್ರಬಿಟ್ಟು ಇನ್ನೊಂದಕ್ಕೆ ಜಿಗಿಯಬಾರದು. ಮುಂದಕ್ಕೆ ಮುಗ್ಗರಿಸಬಾರದು. ಈ ಕುದುರೆಯ ಮೇಲೆ ಹಿಡಿತವಿರಬೇಕು. ಚಕ್ರಗಳಲ್ಲಿ ದಳಗಳು ಇರುತ್ತವೆ. ಬಲವಂತವಾಗಿ ಅಟ್ಟಿ, ಮುಟ್ಟಿ, ತಿವಿದು ಹೊಡೆದು ನಿಲ್ಲಿಸಬಾರದು. ಅಥವಾ ಮುಂದಕ್ಕೆ ಸಾಗಿಸಬಾರದು. ಬಹಳ ಜನ ಸಾಧಕರು ಬಿಳಿಯ ಬಣ್ಣ ಕೆಸರುಗಲ್ಲಿನಂತೆ ಇರುವ ಕುಂಡಲಿನಿಯನ್ನು ಜಾಗೃತಿಸುವ ಸಲುವಾಗಿ ಒತ್ತಾಯಿಸುತ್ತಾರೆ. ಅಂಗಡಿಯ ರಾಜಬೀದಿಯಾದ ಸುಷುಮ್ನಾನಾಳದ ಮೇಲೆ ಸಹಸ್ರಾರದಲ್ಲಿ ಅಡಗಿಕೊಂಡಿರುವ ಅಮೂಲ್ಯ ಬೆಳಕೆಂಬ ರತ್ನವನ್ನು ಕಾಣದೆ ಚಟಪಟಿಸುತ್ತಾರೆ. ಆಧಾರ ಚಕ್ರವೆಂಬ ಧೂಪದ ಪಾತ್ರೆಯ ಮೇಲೆ ಹೃದಯಾನುಭವ ಎಂಬ ಧೂಪವನ್ನು ಹಾಕಿ, ಉಸಿರಿನ ನಿಯಂತ್ರಣದಿಂದ ನಿಲ್ಲಿಸಲು, ಆ ಅಗ್ನಿಯ ಸೆಕೆ ಮೇಲೇರಿ ಬ್ರಹ್ಮರಂಧ್ರವನ್ನು ಮುಟ್ಟುತ್ತದೆ. ಆಗ ಸಹಸ್ರಾರದ ಒಳಗಿರುವ ಕುಂಬಿನಿ ಸರಸಿಯು (ಅಮೃತದ ಕೊಡ) ಒಡೆದು, ಕೆಳಗಿನ ಹೃದಯಸ್ಥಾನದ ಮೇಲೆ ಧಾರೈಸುತ್ತದೆ. ಆಗ ಇಲ್ಲಿಯವರೆಗೂ ಮಂಕಾಗಿದ್ದ ಜ್ಯೋತಿ ಎಂಬ ಮಾಣಿಕ್ಯದ ಬೆಳಗು ತೋರ ತೊಡಗುತ್ತದೆ.

ಇದನ್ನು ಸಾಮಾನ್ಯರು ಅರಿಯಲಾರರು. ನಾನು-ನನ್ನದು ಎಂಬ ಹಮ್ಮನ್ನಳಿಸಿದ ಶರಣರಲ್ಲದೆ ಇತರರು ಅರಿಯರು. ಶರಣರು ಇಹ ಮತ್ತು ಪರದ ಜ್ಞಾನ ಉಳ್ಳವರು. ಪಂಚೇಂದ್ರಿಯಗಳನ್ನು ನಿಗ್ರಹಿಸಬಲ್ಲವರು. ಶರೀರ ಗುಣಗಳನ್ನು ಕಳೆದುಕೊಂಡ ಶರಣರಲ್ಲದೆ ಉಳಿದವರು ಒತ್ತಾಯದಿಂದ ಕುಂಡಲಿನಿಯನ್ನು ಜಾಗ್ರತ ಮಾಡಿಕೊಳ್ಳಲು ಹೋಗಿ ಪ್ರಾಣಕ್ಕೆ ಆಘಾತವ ಮಾಡಿಕೊಳ್ಳವರು. ಈ ಸಾಧನೆ ನಿಮ್ಮ ಶರಣ ಬಸವಣ್ಣನಿಗೆ ಸಾಧ್ಯವಾಗಿದೆ ಎಂದು ನಾನು ಹೇಳಬಯಸುತ್ತೇನೆ.

## 328. ಶರಣರ ಭೃತ್ಯೆ

ಆಯತ ಸ್ವಾಯತ ಅನುಭಾವವ ನಾನೆತ್ತ
ಬಲ್ಲೆನಯ್ಯಾ? ಗುರುಲಿಂಗ ಜಂಗಮಕ್ಕೆ ಅರ್ಥ
ಪ್ರಾಣಾಭಿಮಾನವಂ ಸಮರ್ಪಿಸಿ,
ಅಹಂಕಾರವಳಿದಂತಹ ಪುರಾತನರ ಮನೆಯಲ್ಲಿ
ಭೃತ್ಯರ ಭೃತ್ಯಳಾಗಿಪ್ಪೆನಯ್ಯಾ. ಇದು ಕಾರಣ,
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯನ
ಗಣಂಗಳಲ್ಲದನ್ಯವ ನಾನರಿಯೆನಯ್ಯಾ

ಇಷ್ಟಲಿಂಗವನ್ನು ಆಯತ ಮಾಡಿಕೊಳ್ಳುವುದು, ಪ್ರಾಣಲಿಂಗವನ್ನು ಸ್ವಾಯತ ಮಾಡಿಕೊಳ್ಳುವುದು ಭಾವಲಿಂಗವ ಸನ್ನಿಹಿತ (ಅನುಭಾವವ) ಮಾಡಿಕೊಳ್ಳುವುದು ಇದನ್ನೆಲ್ಲ ನಾನರಿಯೆ. ಗುರು-ಲಿಂಗ-ಜಂಗಮಕ್ಕೆ ತ್ರಿವಿಧ ಸಂಪತ್ತನ್ನು ಅರ್ಪಣೆ ಮಾಡಿಕೊಳ್ಳುವುದು ಮಾತ್ರ ನನಗೆ ಗೊತ್ತು. ಗುರುವಿಗೆ ಅಭಿಮಾನವನ್ನು, ಲಿಂಗಕ್ಕೆ ಪ್ರಾಣವನ್ನು ಜಂಗಮಕ್ಕೆ ಸಂಪತ್ತನ್ನು ಅರ್ಪಿಸಿ ಅಹಂಕಾರವಳಿದ ಶರಣ (ಪುರಾತ)ರ ಮನೆಯಲ್ಲಿ ಅವರ ಸೇವಕರ ಸೇವಕಿಯಾಗಿ ಇರುತ್ತೇನೆ. ಆದ್ದರಿಂದ ಲಿಂಗದೇವನ ಶರಣ ಮಾರ್ಗಿಗಳಲ್ಲದವರ ಬಗ್ಗೆ ನನಗೇನೂ ಆಸಕ್ತಿಯಿಲ್ಲ.

## 329. ಸಾಧನೆ ಹಾದಿಗೆ ಬೇಡಿಕೆ

ಕಂಗಳ ಕಳೆದು ಕರುಳ ಕಿತ್ತು ಕಾಮನ
ಮೂಗ ಕೊಯ್ದು ಭಂಗದ ಬಟ್ಟೆಯ ಭವ
ಗೆಲಿದವಳಿಗಂಗವೆಲ್ಲಿಯದು ಹೇಳಾ!
ಶೃಂಗಾರವೆಂಬ ಹಂಚಿಗೆ ಹಲ್ಲ
ತೆರೆದಡೇನುಂಟು?
ಅಂಗವೆ ಲಿಂಗವಹ ಪರಿಯನೆನಗೆ ಹೇಳಾ
ಪ್ರಭುವೆ ಚೆನ್ನಮಲ್ಲಿಕಾರ್ಜುನದೇವರ ದೇವಾ

ಕಂಗಳ ಕಳೆದು ಅಂದರೆ ಅಜ್ಞಾನದ ದೃಷ್ಟಿಯನ್ನು ಅಳಿದುಕೊಂಡು, ನಶ್ವರ ಮೌಲ್ಯಗಳ ಜರಿದು ಶಾಶ್ವತ ಮೌಲ್ಯಗಳ ನಂಬಿ, ಕರುಳಕಿತ್ತು ಮೋಹ-ಮಮಕಾರಗಳನ್ನೆಲ್ಲ ಅಳಿದುಕೊಂಡು ಕಾಮಪ್ರಜ್ಞೆಯನ್ನು ಕಳೆದುಕೊಂಡು ಲೋಕ-ಲೌಕಿಕದ ಭಂಗದ ದಾರಿಯನ್ನು ತೊರೆದು ಭವವನ್ನು ತೊರೆದ ನನಗೆ ಶರೀರ ಪ್ರಜ್ಞೆ (ಅಂಗ) ಎಂಬುದೇ ಇಲ್ಲ. ಇನ್ನು ಶರೀರದ ಶೃಂಗಾರದ ಬಗ್ಗೆ ನನಗೆ ಆಸಕ್ತಿಯೇ ಇಲ್ಲ. "ನನ್ನ ಅಂಗ (ಶರೀರ)ವು ಸರ್ವಾಂಗಲಿಂಗಮಯವಾಗಬೇಕು. ಈ ಸಾಧನೆಯನ್ನು ಪ್ರಭುದೇವರೆ ನನಗೆ ಹೇಳಿಕೊಡಿರಿ." ಎಂದು ಅಕ್ಕನವರು ಪ್ರಭುದೇವರಲ್ಲಿ ವಿನಂತಿಸುತ್ತಾರೆ.

## 330. ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ

ಮರವಿದ್ದು ಫಲವೇನು ನೆರಳಿಲ್ಲದನ್ನಕ್ಕ.
ಧನವಿದ್ದು ಫಲವೇನು ದಯವಿಲ್ಲದನಕ್ಕ?
ಹಸುವಿದ್ದು ಫಲವೇನು ಹಯನಲ್ಲದನ್ನಕ್ಕ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?
ಅಲಗಿದ್ದು ಫಲವೇನು ಬಾನವಿಲ್ಲದನ್ನಕ್ಕ?
ಚೆನ್ನಮಲ್ಲಿಕಾರ್ಜುನದೇವರ ದೇವಾ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ

ಒಂದು ಬೃಹತ್ತಾದ ವೃಕ್ಷವಿದೆ ಎಂದುಕೊಳ್ಳುವಾ. ಅದರ ಎಲೆಗಳೆಲ್ಲ ಒಣಗಿ ಹೋಗಿ, ಉದುರಿ ಹೋಗಿ ನೆರಳೇಬೀಳದೆ ಇದ್ದರೆ  ಅಂಥ ಗಿಡದಿಂದ ಪ್ರಯೋಜನವೇನು? ಒಬ್ಬ ವ್ಯಕ್ತಿಯ ಬಳಿ ಅಪಾರವಾದ ಧನಸಂಪತ್ತಿದೆ. ಆದರೆ ಅದನ್ನು ಹಂಚಿ ಉಣ್ಣುವ ದಯಾಬುದ್ಧಿಯಿಲ್ಲ ಔದಾರ್ಯವಿಲ್ಲ, ಮಾನವೀಯತೆ ಇಲ್ಲ. ಒಂದು ಉತ್ತಮ ತಳಿಯ ಹಸುವಿದೆ ಎಂದುಕೊಳ್ಳುವಾ. ಅದು ಗಬ್ಬವಾಗದೆ, ಕರುಹಾಕದೆ ಗೊಡ್ಡಾಗಿದೆ. ಅಂಥ ಹಸುವಿನಿಂದ ಪ್ರಯೋಜನವೇನು? ಒಬ್ಬ ಮಹಿಳೆ ಅಪಾರ ಸುಂದರಿಯಾಗಿದ್ದಾಳೆ ಎಂದುಕೊಳ್ಳುವಾ. ಆದರೆ ಆಕೆಯಲ್ಲಿ ಸದ್ಗುಣವೇ ಇಲ್ಲ; ಮನೆಗೆ ಮಹಾಮಾರಿಯಾಗಿದ್ದಾಳೆ. ರೂಪವಿಲ್ಲದಿದ್ದರೂ ಸದ್ಗುಣವಿರುವ ಹೆಣ್ಣು ಮನೆಗೆ ಕಣ್ಣಾಗುತ್ತಾಳೆ. ರೂಪವಿದ್ದರೂ ಸದ್ಗುಣವಿಲ್ಲದೆ ಇರುವ ಹೆಣ್ಣು ಮನೆಗೆ ಹುಣ್ಣಾಗಿ ಬಹಳಬಾಧೆ ನೀಡುತ್ತಾಳೆ. ಅಲಗು ಎಂದರೆ ಊಟದ ತಟ್ಟೆ. ಇದು ಇದ್ದು ಪ್ರಯೋಜನವೇನು. ಅದಕ್ಕೆ ಬೆಲೆ ನೀಡುವ ಊಟ ಇಲ್ಲದಿದ್ದರೆ? ಅಲಗು ಎಂದರೆ ಕತ್ತಿ. ಚೂಪಾದ ಕತ್ತಿ ಇದ್ದು ಪ್ರಯೋಜನವೇನು? ಇರಿಯುವ ಮನಸ್ಸು ಇಲ್ಲದಿದ್ದರೆ. ಹಾಗೆ ದೇವರೆ ನಾನು ಬದುಕಿಯೂ ಪ್ರಯೋಜನವೇನು? ನಿಮ್ಮ ಜ್ಞಾನವಿಲ್ಲದೆ ಇದ್ದರೆ ಆಯುಷ್ಯ ನಿರರ್ಥಕ.


ಮುಂದುವರಿಯುವುದು...







# ಶ್ರೀಗುರು ನಿಮಗೆ ವಚನದಿಂದ ಶರಣೆಂಬೆ?








ಶ್ರೀಗುರು ವಚನದಿಂದಧಿಕ ಸುಧೆಯುಂಟೆ
ರಾಗದಿಂದಲಿ ಬೇರೆ ಭವಬೀಜಮುಂಟೆ ॥ ಪ ॥

ನರಜನ್ಮದಿಂದಿಹದೊಳು ಮಿಗಿಲುಂಟೆ
ಕರಣವಿಜಯದಿಂದೆ ಕಲಿತನಮುಂಟೆ
ಧರೆಗೆ ಯಾಚನೆಯಿಂದೆ ಲಘುತರಮುಂಟೆ
ಪರಬೊಮ್ಮದರಿವಿನಿಂದುರೆಜಾಣ್ಮೆಯುಂಟೆ ॥ 1 ॥

ಕಡುಲೋಭದಿಂದೆ ದುರ್ಗುಣಮನ್ಯಮುಂಟೆ
ಪಡೆದಪವಾದದಿಂ ಮರಣಮೊಂದುಂಟೆ
ಎಡವಿಡದಿಹ ಸತ್ಯದಿಂ ತಪಮುಂಟೆ
ಕೆಡಿಸದಿಪ್ಪಭಿಮಾನದಿಂ ಧನಮುಂಟೆ ॥ 2 ॥

ತನುವಿದನುಳಿದಿಂದ್ರಜಾಲಮೊಂದುಂಟೆ
ನೆನೆಗೋಲಿನಿಂದೆ ನೋಯಿಸುವಲಗುಂಟೆ
ವಿನಮಿತವಹುದರಿಂದುಪಚಾರಮುಂಟೆ
ತನಗಿಂತ ಪ್ರಿಯವಾದ ವಿಷಯವೊಂದುಂಟೆ ॥ 3 ॥

ಶಮೆಯಿಂದ ಮುಕುತಿಸಂಪದ ಪೆರತುಂಟೆ
ವಿಮಲಮಾನಸದಿಂದೆ ಶುಭತೀರ್ಥಮುಂಟೆ
ಕ್ರಮತಪ್ಪಿ ನಡೆವುದರಿಂ ಕಷ್ಟಮುಂಟೆ
ಮಮಕಾರದಿಂದ ಮಿಕ್ಕಿನ ಬಂಧಮುಂಟೆ ॥ 4 ॥

ಕರುಣದಿಂದತಿಶಯವಹ ಧರ್ಮಮುಂಟೆ
ವಿರತಿಯಿಂದಿತರಸಂಪದ ಸುಖಮುಂಟೆ
ವರಭಕ್ತಿಯಿಂದ ಸಚ್ಚರಿತಮೊಂದುಂಟೆ
ಗುರುಶಂಭುಲಿಂಗದಿಂ ಪರದೈವಮುಂಟೆ ॥ 5 ॥

ಶ್ರೀಗುರು ವಚನದಿಂದಧಿಕ ಸುಧೆಯುಂಟೆ
ರಾಗದಿಂದಲಿ ಬೇರೆ ಭವಬೀಜಮುಂಟೆ ॥ ಪ ॥

* ಲೇಖಕರು: – ಶ್ರೀ ನಿಜಗುಣ ಶಿವಯೋಗಿಗಳು



## ಅಂತರಂಗ ಬಹಿರಂಗ

ಪೂಜ್ಯ ಶ್ರೀ
ಚನ್ನಬಸವಾನಂದ
ಸ್ವಾಮೀಜಿ

# ಕಲ್ಯಾಣ ರಾಜ್ಯದ ಪರಿಕಲ್ಪನೆ

ಎಲ್ಲರೂ ನೀಡಲು ಸಶಕ್ತರು, ಆಸಕ್ತರೂ ಸಮರ್ಥರು, ಬೇಡುವವರೇ ಇಲ್ಲದ, ಸಮೃದ್ಧ, ಸಂತೃಪ್ತ ಶರಣ ಸಾಮ್ರಾಜ್ಯ ಅಥವಾ ಕಲ್ಯಾಣ ರಾಜ್ಯದ ನಿರ್ಮಾಪಕರಾದ ವಿಶ್ವಗುರು ಬಸವಣ್ಣನವರು ಜನಿಸಿ ಇಂದಿಗೆ 883 ವರ್ಷಗಳಾದವು. 1134 ರ ಅಕ್ಷಯ ತೃತೀಯ ವೈಶಾಖ ಮಾಸದಂದು ಇಂದಿನ ವಿಜಯಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಶೈವ ಬ್ರಾಹ್ಮಣ ಮನೆತನದ ಮಾದರಸ ಮಾದಲಾಂಬಿಕೆಯರ ಪವಿತ್ರ ಗರ್ಭದಲ್ಲಿ ಉದಯಿಸಿದ ಬಸವ ಭಾಸ್ಕರನು ಜಗಜ್ಯೋತಿಯಾಗಿ ಬೆಳಗಿಸಿದರು.

ರಾಷ್ಟ್ರಕವಿ ಕುವೆಂಪು ಅವರು ಹೇಳುವಂತೆ ಕಾರ್ತಿಕದ ಕತ್ತಲಲ್ಲಿ ಆಕಾಶದೀಪವಾಗಿ ಬಂದವರು. ಬಟ್ಟೆ (ದಾರಿ) ಗೆಟ್ಟವರಿಗೆದೊಂದಿ ದಿಕ್ಕಾಗಿ ದಾರಿ ತೋರಿದವರು. ಗುರು ಬಸವಣ್ಣನವರು ಬಾಲ್ಯದಿಂದಲೇ ಸಮಾಜದಲ್ಲಿ ಆಚರಣೆಯಲ್ಲಿದ್ದ ರೂಢಿ, ಸಂಪ್ರದಾಯಗಳನ್ನು ತೀವ್ರವಾಗಿ ಖಂಡಿಸುತ್ತಾರೆ.

ಅಂದು ಹಬ್ಬ ಹರಿದಿನಗಳನ್ನು ಆಚರಿಸುವಾಗ ಹೋತ ಕುರಿಗಳನ್ನು ದೇವರ ಹೆಸರಿನಲ್ಲಿ ಬಲಿಕೊಡಲಾಗುತ್ತಿತ್ತು. ಒಂದು ದಿನ ಕುರಿಯನ್ನು ತಂದು ಕಟ್ಟಲಾಗಿದೆ. ಹಬ್ಬದ ಸಿದ್ಧತೆ ನಡೆದಿತ್ತು. ತಳಿರು-ತೋರಣ ಕಟ್ಟಿದ್ದರು. ಹಸಿದ ಕುರಿಯು ತಳಿರನ್ನು ತಿನ್ನುತಿತ್ತು. ಆ ದೃಶ್ಯವನ್ನು ಕಂಡ ಬಾಲಕ ಬಸವಣ್ಣ ಹೇಳುತ್ತಾರೆ.

**ಹಬ್ಬಕ್ಕೆ**
**ತಂದ**
**ಹರಕೆಯ**
**ಕುರಿ**
**ತೋರಣಕ್ಕೆ ತಂದ**
**ತಳಿರ ಮೇಯಿತ್ತು.**
**ಅದಂದೆ ಹುಟ್ಟಿತ್ತು ; ಅದಂದೆ ಹೊಂದಿತ್ತು**
**ಕೊಂದವರುಳಿವರೆ ಅಯ್ಯಾ**
**ಕೂಡಲಸಂಗಮದೇವಾ?**



ಒಮ್ಮೆ ಬಲಿ ಕೊಡುವ ಪ್ರಸಂಗದಲ್ಲಿ ಹೋತವು ಕಣ್ತುಂಬ ನೀರು ತುಂಬಿಕೊಂಡು ದುಃಖಿಸುತ್ತದೆ. ಅದರ ದುಃಖವನ್ನು ಕಂಡು ಬಾಲಕ ಬಸವಣ್ಣನವರ ಮನಸ್ಸು ಮಿಡಿಯುತ್ತದೆ. ದುಃಖಿಸುತ್ತದೆ. ಆಗ ಹೇಳುತ್ತಾರೆ.

**ವೇದವ ನೋದುವವರ ಮುಂದೆ ಅಳು**
**ಕಂಡಾ ಎಲೆ ಹೋತೆ!**
**ಶಾಸ್ತ್ರವನೋದುವವರ ಮುಂದೆ ಆಳು**
**ಕಂಡಾ ಎಲೆ ಹೋತೆ!**

ನೀನತ್ತುದಕೆ ತಕ್ಕುದ ಮಾಡ್ವ ನಮ್ಮ ಕೂಡಲ ಸಂಗಮದೇವ ದೇವರು

ಧರ್ಮದ ಹೆಸರಿನಲ್ಲಿ, ಆಡು, ಕುದುರೆಗಳನ್ನು ಬಲಿ ಕೊಡುವುದು, ಹುಟ್ಟಿನಿಂದಲೇ ಮಾನವನಲ್ಲಿ ಮೇಲು ಕೀಳು ಎಂದು ಭೇದ ಮಾಡುವುದು, ಅಸ್ಪೃಶ್ಯತೆ ಆಚರಿಸುವುದು ಸ್ತ್ರೀ-ಪುರುಷ ಎಂಬ ಲಿಂಗಭೇದ, ಮೇಲು-ಕೀಳು ಎಂಬ ಜಾತಿಭೇದ ಇವೆಲ್ಲವನ್ನು ಗುರು ಬಸವಣ್ಣನವರು ತೀವ್ರವಾಗಿ ಖಂಡಿಸಿದರು.

**ಇವನಾರವ, ಇವನಾರವ ಇವನಾರವ ಎಂದು ಭೇದವನೆಣಿಸದೆ, ಇವನಮ್ಮವ, ಇವನಮ್ಮವ, ಇವನಮ್ಮವನೆಂದು** ಎಲ್ಲರನ್ನು ಇಂಬಿಟ್ಟುಕೊಂಡರು ಜಾತಿಯಿಂದ, ವರ್ಣದಿಂದ, ವರ್ಗದಿಂದ ಇವನು ಯಾರು ಎಂದು ಭೇದ ಮಾಡಬಾರದು. ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ ಎಂಬ ವಿಶ್ವಭ್ರಾತೃತ್ವದ ತಳಹದಿಯ ಮೇಲೆ ಸುಂದರವಾದ ಕಲ್ಯಾಣರಾಜ್ಯವನ್ನು ಗುರುಬಸವಣ್ಣನವರು ನಿರ್ಮಿಸಿದರು.

ಪ್ಲೇಟೋನ ಆದರ್ಶ ರಾಜ್ಯದ ಪರಿಕಲ್ಪನೆಯಲ್ಲಿ ಬುದ್ಧಿಜೀವಿಗಳು (Intellectual) ಮತ್ತು ಸಾಮಾನ್ಯರು (Manual) ಎಂಬ ಭೇದವಿತ್ತು. ಆದರೆ ಗುರು ಬಸವಣ್ಣನವರು ಕಟ್ಟಿದ ಅನುಭವ ಮಂಟಪದಲ್ಲಿ ವಿದ್ವಾಂಸರು, ಸಾಮಾನ್ಯರು ಎಂಬ ಭೇದವೂ ಇರಲಿಲ್ಲ. ಮಹಾನ್ ಮೇಧಾವಿಯಾಗಿದ್ದ ಅಲ್ಲಮಪ್ರಭು, ಚಿನ್ಮಯ ಜ್ಞಾನಿ ಚನ್ನಬಸವಣ್ಣ, ಪ್ರಧಾನಮಂತ್ರಿಗಳು, ಪ್ರವಾದಿಗಳೇ ಆಗಿದ್ದ ಗುರುಬಸವಣ್ಣನವರ ಜೊತೆಯಲ್ಲಿ ಕಸ ಗುಡಿಸುವ ಕಾಯಕದ ಶರಣೆ ಸತ್ಯಕ್ಕ. ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯ ಕುಂಬಾರ ಗುಂಡಯ್ಯನಂಥ ಶರಣರು ಸಮಾನವಾಗಿ ಕುಳಿತು ಅನುಭಾವಗೋಷ್ಠಿ ಮಾಡುತ್ತಿದ್ದರು. ಚರ್ಚೆಯಲ್ಲಿ ಭಾಗಿಯಾಗುತ್ತಿದ್ದರು.

ಅವರವರ ಉದ್ಯೋಗದಿಂದ ಜಾತಿಗಳು ನಿರ್ಮಾಣವಾಗಿವೆ. ಕಾಸುವವನು ಕಮ್ಮಾರ, ಬಟ್ಟೆ ತೊಳೆಯುವವನು ಮಡಿವಾಳ, ಬಟ್ಟೆ ಹೊಲಿಯುವವನು ಸಿಂಪಿಗ, ವ್ಯಾಪಾರ ಮಾಡುವವರು ಶೆಟ್ಟರು. ಜಾತಿ ಭೇದ ಹೋಗಲಾಡಿಸಿ ನೀತಿ ಮಾರ್ಗ ತೋರುವುದಕ್ಕೆ ವಿಶ್ವಗುರು ಬಸವಣ್ಣನವರು ಇಷ್ಟಲಿಂಗವನ್ನು ಕಂಡು ಹಿಡಿದರು. ಇದು ಜಗತ್ಕರ್ತನ ಕುರುಹು ಹೌದು ಸಮಾನತೆಯ ಚಿಹ್ನೆಯೂ ಹೌದು. ಗುರುವಿನ ಮೂಲಕ ಇಷ್ಟಲಿಂಗದೀಕ್ಷೆ ಪಡೆದ ಮೇಲೆ ಪೂರ್ವದ ಜಾತಿ ಅಳಿಯುತ್ತದೆ. ಗುರು ಬಸವಣ್ಣನವರ ಪ್ರಕಾರ ಮಾನವನಲ್ಲಿ ಕೇವಲ ಎರಡೇ ಕುಲಗಳು. ಭವಿಯೊಂದು ಕುಲ ; ಭಕ್ತ ಒಂದು ಕುಲ.

ದೇವರು-ಧರ್ಮವನ್ನು ನಂಬಿ ಧರ್ಮ ಸಮಾಜಗಳ ಪ್ರಜ್ಞೆ ಬೆಳೆಸಿಕೊಂಡು ಬಾಳುವವನು ಭಕ್ತ. ದೇವರು ಧರ್ಮದಲ್ಲಿ ನಂಬಿಕೆಯಿಲ್ಲದೆ, ನಾಸ್ತಿಕನಾಗಿ ತನ್ನ ಸ್ವಾರ್ಥಕ್ಕಾಗಿಯೇ ಬದುಕುವವರು ಭವಿಗಳು, ಭಕ್ತನಾಗಲು ಭವಿಗಳಿಗೆ ಯಾವತ್ತೂ ಧರ್ಮದ ಬಾಗಿಲನ್ನು ತೆರೆದಿಟ್ಟರು.

ಇಷ್ಟಲಿಂಗದ ಸೂತ್ರವನ್ನು ಹಿಡಿದು-ಕೊಂಡೇ ವಿಶ್ವಗುರು ಬಸವಣ್ಣನವರು ಜಾತಿ-ವರ್ಣ-ವರ್ಗರಹಿತ, ಧರ್ಮಸಹಿತವಾದ ಕಲ್ಯಾಣ ರಾಜ್ಯವನ್ನು ಕಟ್ಟಿದರು. ಅಂತೆಯೇ ಸಮಗಾರ ಹರಳಯ್ಯನೂ ಇಷ್ಟಲಿಂಗವನ್ನು ಧರಿಸಿ ಲಿಂಗಾಯತನಾದ

ಬ್ರಾಹ್ಮಣ ಮಧುವರಸನೂ ದೀಕ್ಷೆ ಹೊಂದಿ ಲಿಂಗಾಯತ ಧರ್ಮದ ಅನುಯಾಯಿಯಾದ.

"ದೇವ (ಇಷ್ಟಲಿಂಗ ಸಹಿತ) ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದೊಡೆ

ನಿಮ್ಮಾಣೆ, ನಿಮ್ಮ ಪ್ರಮಥರಾಣೆ ಎಂದು ಗುರುಬಸವಣ್ಣನವರು ಹೇಳುತ್ತಾರೆ. ಗುರುಬಸವಣ್ಣನವರ ವಿಚಾರಧಾರೆಯಿಂದ ಪ್ರಭಾವಿತರಾಗಿ ಎಲ್ಲ ಜಾತಿ-ಮತ, ವರ್ಗ, ವರ್ಣದ ಜನ ಇಷ್ಟಲಿಂಗ ದೀಕ್ಷೆ ಪಡೆದು ತಂಡೋಪತಂಡವಾಗಿ ಲಿಂಗಾಯತ ಧರ್ಮ ಸ್ವೀಕರಿಸಿದರು. ಕೆಲವು ಸಂಪ್ರದಾಯವಾದಿಗಳು ಮನೆಗೆ ಬಂದ ಶರಣರಿಗೆ ಅವರ ಜಾತಿ ಯಾವುದು ಎಂದು ತಿಳಿದುಕೊಳ್ಳಲು 'ಕಾಯಕ' ಯಾವುದೆಂದು ಕೇಳುತ್ತಿರಬಹುದು. ಕಾಯಕ ಯಾವುದು ಎಂದು ಕೇಳಿದರೆ ಜಾತಿ ಗೊತ್ತಾಗುತ್ತದೆ ಎಂಬುದು ಅವರ ಲೆಕ್ಕಾಚಾರ. ಅದಕ್ಕಾಗಿ ಗುರು ಬಸವಣ್ಣನವರು ಕಾಯಕ ಯಾವುದು ಎಂದು ವಿಚಾರಿಸಕೂಡದು. ಇಷ್ಟಲಿಂಗ ಧರಿಸಿದವರೆಲ್ಲ ಶರಣರೆ ಅದರಲ್ಲಿ ಯಾವುದೇ ಭೇದವನ್ನು ಎಣಿಸಬಾರದು ಎಂಬುದು ಗುರು ಬಸವಣ್ಣನವರ ಸಿದ್ಧಾಂತ.

ಇಂದು ಸರ್ಕಾರದವರು ಹಿಂದುಳಿದ ವರ್ಗಗಳ ಕಲ್ಯಾಣ ಪರಿಶಿಷ್ಟ ಜಾತಿ – ಪರಿಶಿಷ್ಟ ಪಂಗಡಗಳ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹೀಗೆ ಅನೇಕ ಇಲಾಖೆಗಳನ್ನು ಮಾಡಿಕೊಂಡಿದ್ದಾರೆ. ವ್ಯಕ್ತಿಯು ಕೇವಲ ಆರ್ಥಿಕವಾಗಿ ಪ್ರಗತಿ ಹೊಂದಿದರೆ ಸಾಲದು. ಆರ್ಥಿಕ ಸಮೃದ್ಧಿ, ಮಾನಸಿಕ ಸಂತೃಪ್ತಿ ಮತ್ತು ಆತ್ಮಿಕ ಸುಯಿಧಾನ ಈ ಮೂರು ರೀತಿಯ ಅಭಿವೃದ್ಧಿಯೇ ಕಲ್ಯಾಣ. ವ್ಯಕ್ತಿ ಕಲ್ಯಾಣ ಕುಟುಂಬ ಕಲ್ಯಾಣ, ರಾಷ್ಟ್ರ ಕಲ್ಯಾಣದ ಮೂಲಕ ವಿಶ್ವಕಲ್ಯಾಣ ಗುರು ಬಸವಣ್ಣನವರ ಗುರಿಯಾಗಿತ್ತು.

## ಹೆಕ್ಕಿದ ಕಥೆ

ಒಂದು ಬ್ಯಾಂಕ್ ಇದೆ ಎಂದು ಕಲ್ಪಿಸಿಕೊಳ್ಳಿ. ಅದು ಪ್ರತಿದಿನ ನಿಮ್ಮ ಅಕೌಂಟಿಗೆ 86,400 ರೂ.ಗಳನ್ನು ಸಂದಾಯ ಮಾಡುತ್ತದೆ. ಆದರೆ ಒಂದು ಷರತ್ತಿನ ಮೇಲೆ. ಅದೆಂದರೆ, ಮರುದಿನಕ್ಕೆ ಹಣವನ್ನು ಉಳಿಸಿಕೊಳ್ಳುವಂತಿಲ್ಲ ಅಥವಾ ಭವಿಷ್ಯಕ್ಕೆಂದು ಸಂಗ್ರಹ ಮಾಡುವಂತಿಲ್ಲ. ಅದನ್ನು ಆಯಾ ದಿನವೇ ಖರ್ಚು ಮಾಡಬೇಕು. ಇಲ್ಲದಿದ್ದರೆ ನಿಮ್ಮ ಅಕೌಂಟಿಂದ ವಜಾ ಮಾಡಲಾಗುತ್ತದೆ. ಹೀಗಿದ್ದಾಗ ನೀವೇನು ಮಾಡುತ್ತೀರಿ? ಪ್ರತಿ ಪೈಸೆಯನ್ನೂ ಉತ್ತಮ ರೀತಿಯಲ್ಲಿ ಖರ್ಚು ಮಾಡಲು ಆಲೋಚಿಸುತ್ತೀರಿ,



ಅಲ್ಲವೆ? ಹೌದು, ಅಂತಹ ಬ್ಯಾಂಕ್ ಪ್ರತಿಯೊಬ್ಬರ ಬಳಿಯೂ ಇದೆ. ಅದರ ಹೆಸರು ಸಮಯ! ಪ್ರತಿದಿನವೂ ಅದು ನಮಗೆ 86,400 ಸೆಕೆಂಡು ನೀಡುತ್ತದೆ. ಅದನ್ನು ಹೇಗೆ ಉಪಯೋಗಿಸಿಕೊಳ್ಳುತ್ತೇವೆ ಎಂಬುದು ನಮಗೆ ಬಿಟ್ಟದ್ದು. ಮಧ್ಯರಾತ್ರಿಯಾಗುತ್ತಿದ್ದಂತೆ ಆ ಅಕೌಂಟ್ ಪೂರ್ತಿ ಖಾಲಿಯಾಗುತ್ತದೆ. ಮರುದಿನ ಮತ್ತೆ ಹೊಸದಾಗಿ 86,400 ಸೆಕೆಂಡು ಸಿಗುತ್ತವೆ. ಪ್ರತಿಯೊಬ್ಬರಿಗೂ ಇದು ಸಮಪ್ರಮಾಣದಲ್ಲಿಯೇ ಹಂಚಿಕೆಯಾಗುತ್ತದೆ. ಬಡವನಿಗೆ ಒಂದು ಸಮಯ, ಶ್ರೀಮಂತನಿಗೆ ಒಂದು ಸಮಯ ಅಂತಿಲ್ಲ. ಆ ಜಾತಿ ಈ ಜಾತಿ ಎಂಬ ತಾರತಮ್ಯವಿಲ್ಲ. ಒಬ್ಬನಿಗೆ ಜಾಸ್ತಿ ಸಮಯ, ಇನ್ನೊಬ್ಬನಿಗೆ ಕಡಿಮೆ ಅಂತಿಲ್ಲ. ಪ್ರತಿಯೊಬ್ಬರಿಗೂ ಸಿಗುವುದು ಅಷ್ಟೇ ಸೆಕೆಂಡು. ಹೀಗಾಗಿ ಸಮಯವನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳುವುದು ಬುದ್ಧಿವಂತರ ಲಕ್ಷಣ. ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಬೇಕು, ಇಲ್ಲದಿದ್ದಲ್ಲಿ ನಷ್ಟ ನಮಗೇ ಅಲ್ಲವೆ?





# ಇಷ್ಟಲಿಂಗೋಪಾಸನೆ ವೈಜ್ಞಾನಿಕ ಅರಿವು

ಶ್ರೀ ಬಸವ ಕುಮಾರ ಸ್ವಾಮೀಜಿ



"ಮನಕ್ಕೆ
ಮಹಾನು
ಭಾವವೇ ಚೆಲುವು"
ಎಂಬುದು ವಚನೋಕ್ತಿ.

ಮನವ ವಜ್ರ ತುರಂಗವ ಮಾಡಿ ಎಂದು ಜಗನ್ಮಾತೆ ಅಕ್ಕಮಹಾದೇವಿಯವರ ಉಕ್ತಿ ಮನದ ಪ್ರಸಾದ ಭೋಗಕ್ಕೆ ಸಂಬಂಧಿಸಿದ್ದು ಹೇಳಿ ಮಾಡಿಸಿದಂತಿದೆ.

ಈ ವಚನ 'ಎಲೆ ಮನವೆ ನೀ ನಿನ್ನ ನಿಜವ ತಿಳಿವಡೆ ಆ ನಿನ್ನ ನಿಜವ ಹೇಳುವೆ ಕೇಳು. ಅದು ವರ್ಣಾತೀತ, ಅದು ಕೇವಲ ಜ್ಯೋತಿ, ನೀನದನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು. ಅದೀಗ ನಿನ್ನ ಪರಿಪೂರ್ಣತ್ವದ ನೆಲೆ. ಆ ನಿನ್ನ ನಿಜವ ನಿಶ್ಚಯಿಸಿ ನಿರ್ಗಮನಿಯಾದಲ್ಲಿ ಅದೇ ಸಮ್ಯಕ್ ಜ್ಞಾನದ ತೋರಿಕೆ. ಆ ತೋರಿಕೆಯ ಅಖಂಡ ಬೆಳಗಿನ ಹೊಳಹಿನೊಳಗೆ ನೀ ನಮ್ಮ ಗುಹೇಶ್ವರ ಲಿಂಗದ ಚರಣವನರಸಿಕೊಂಡು ನಿಶ್ಚಿಂತನಾಗು ಎಲೆ ಮನವೆ. ಎಂದು ಶೂನ್ಯ ಪೀಠಾಧೀಶ ವ್ಯೋಮಕಾಯಸಿದ್ಧ ಅಲ್ಲಮ ಪ್ರಭುದೇವರು ತಮ್ಮ ಮನಕ್ಕೆ ಉಪದೇಶ ಮಾಡುವುದರೊಂದಿಗೆ ಜಗತ್ತಿನ ಮಾನವ ಕುಲಕೋಟಿಗೆ ಉಪದೇಶಿಸಿದ್ದಾರೆ. ಇದು ಮನದ ಪ್ರಸಾದ ಭೋಗಕ್ಕೆ ಸಂಬಧಿಸಿದ್ದು.

**ಬುದ್ಧಿ :** ಮನಸ್ಸು ಏನೇನೋ ಸಂಕಲ್ಪ ವಿಕಲ್ಪಗಳನ್ನು ಮಾಡುತ್ತಿರುತ್ತದೆ. ಅದನ್ನು ಸರಿಯಾಗಿ ತೂಗಿ ನೋಡಿ ನಿರ್ಣಯಿಸುವ ಕೆಲಸವನ್ನು ಬುದ್ಧಿ ಮಾಡುತ್ತಿರುತ್ತದೆ. ಬುದ್ಧಿ ಒಳ್ಳೆಯದಾಗಿದ್ದರೆ ನಿರ್ಣಯ ತೆಗೆದುಕೊಂಡು ಮಾರ್ಗದರ್ಶನ ಮಾಡುತ್ತಿರುತ್ತದೆ. ಪ್ರಗತಿ ಪಥದತ್ತ ಕೊಂಡೊಯ್ಯುತ್ತಿರುತ್ತದೆ. ಬುದ್ಧಿ ಕುಬುದ್ಧಿಯಾಗಿದ್ದರೆ, ದುರ್ಬುದ್ಧಿಯಾಗಿದ್ದರೆ ನಿರ್ಣಯಿಸುವಲ್ಲಿ ಎಡವಿದಾಗ ತನಗೂ ಹಾನಿ ಇತರರಿಗೂ ಹಾನಿಯನ್ನುಂಟು ಮಾಡುವುದು. ಬುದ್ಧಿಶಕ್ತಿಯಿಂದ ಲೌಕಿಕವಾಗಿ, ಪಾರಮಾರ್ಥಿಕವಾಗಿ ಆನಂದವನ್ನುಂಟು ಮಾಡಬಹುದು. ವೈದ್ಯಕೀಯ, ವಿಜ್ಞಾನ, ತಂತ್ರಜ್ಞಾನ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ, ಆಧ್ಯಾತ್ಮಿಕವಾಗಿ ಸಾಕಷ್ಟು ಪ್ರಗತಿಯನ್ನು ಮಾಡಬಹುದು.

**ವೈದ್ಯಕೀಯ** ಕ್ಷೇತ್ರದಲ್ಲಿ ಎಷ್ಟು ಬದಲಾವಣೆಯಾಗಿದೆ ಎಂದರೆ ಹೇಳತೀರದು. ಮಾರಕ ರೋಗಗಳನ್ನು ನಿಯಂತ್ರಿಸುವಲ್ಲಿ, ಹೋಗಲಾಡಿಸುವಲ್ಲಿ, ಒಬ್ಬರ ಅಂಗಾಂಗಗಳನ್ನು ಮತ್ತೊಬ್ಬರಿಗೆ ಅಂದರೆ ಕಿಡ್ನಿ, ಮೆದುಳು, ಹೃದಯಗಳಂತಹ ಅದ್ಭುತವಾದ ಅತೀ ಸೂಕ್ಷ್ಮವಾದ ಅವಯುವಗಳನ್ನು ಜೋಡಿಸಿ ಪವಾಡ ಸದೃಶವಾಗಿ ಕಾರ್ಯನಡೆದಿದ್ದು ಬುದ್ಧಿಯ ಚಾತುರ್ಯತನದಿಂದಲೆ.

**ವಿಜ್ಞಾನಿಗಳು** ಆಕಾಶದಲ್ಲಿರುವ ಮಾನವನನ್ನು ಉಪಗ್ರಹಗಳಲ್ಲಿ ಕಳಿಸಿ ಚಂದ್ರಲೋಕದಂತಹ ಹಲವಾರು ಗ್ರಹಗಳನ್ನು ಸಂದರ್ಶಿಸಿ ಅಲ್ಲಿರುವ ವಾತಾವರಣವನ್ನು ಕಂಡುಹಿಡಿಯುವಲ್ಲಿ, ಉಪಗ್ರಹಗಳನ್ನು ಆಕಾಶದಲ್ಲಿ ಹಾರಿಬಿಟ್ಟು ಭೂಮಿಯ ಮೇಲೆ ಇದ್ದು ಅದನ್ನು ನಿಯಂತ್ರಿಸಿ ಹಲವಾರು ಮಾಹಿತಿಗಳನ್ನು ಪಡೆಯುವಲ್ಲಿ ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದಾನೆ. ಮಾರಕ ಅಸ್ತ್ರಗಳನ್ನು ತಯಾರಿಸುವಲ್ಲಿಯೂ ಆಕಾಶದಲ್ಲಿ ವಿಮಾನ, ರಾಕೆಟ್ ಮುಖಾಂತರ ಪ್ರಯಾಣಿಸುವುದನ್ನು, ಪಂಚಲೋಹದ ಕಂಬಿಯನ್ನು ಭೂಮಿಯ ಮೇಲೆ ಹಾಯಿಸಿ, ಉಗಿಬಂಡಿಯನ್ನು ಡೀಜಲ್‌ದಿಂದ ಕಲ್ಲಿದ್ದಲಿನಿಂದ ವಿದ್ಯುತ್‌ತಂತಿಗಳ ಮುಖಾಂತರ ಇಡೀ ಜಗತ್ತನ್ನು ಸುತ್ತುವ ಹಾಗೆ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಹಳ್ಳಿಹಳ್ಳಿಗಳಿಗೆ, ಊರು ಊರುಗಳಿಗೆ ರಸ್ತೆಯನ್ನು ಸಂಪರ್ಕಿಸಿ ವಾಹನಗಳನ್ನು ನಿರ್ಮಿಸಿದ್ದಾರೆ. ಇನ್ನು ನೀರಿನಲ್ಲಿ ಸಮುದ್ರದಲ್ಲಿ (ಆಳದ ನೆಲೆಯಿಲ್ಲದ) ತಳಕ್ಕೆ ಹೋಗಿ ಮುತ್ತು, ಹವಳಗಳನ್ನು ಪಡೆಯುವಲ್ಲಿ ಅಲ್ಲಿಯ ಅದ್ಭುತವನ್ನು ಪ್ರಾಣಿಲೋಕವನ್ನು ಪರಿಚಯಿಸುವಲ್ಲಿ ಹಡಗಿನ ಮುಖಾಂತರ ಪ್ರಯಾಣಿಸಲು ಸಹ ವ್ಯವಸ್ಥಿತರೂಪವಾಗಿ ಯೋಜನೆ ಹಾಕಿಕೊಟ್ಟಿದ್ದಾನೆ. ಸಮುದ್ರದಲ್ಲಿ ಸುರಂಗಮಾರ್ಗ ಮಾಡಿ ಬುಲೆಟ್ ಟ್ರೈನ್ ಓಡಿಸುವ ಜಾಣ್ಮೆಯನ್ನು ಮೆರೆದಿದ್ದಾನೆ. ಉಪಗ್ರಹಗಳ ಮುಖಾಂತರ ಹವಾಮಾನದ ಏರುಪೇರುಗಳನ್ನು ಭೂಕಂಪನ, ಸುನಾಮಿಯಂತಹವುಗಳನ್ನು, ನಮ್ಮ ದೇಶದ ಬಾರ್ಡರ್‌ಗಳಲ್ಲಿ ಶತ್ರು ವಿಮಾನಗಳ ಚಲನವಲನಗಳನ್ನು ಪತ್ತೆ ಹಚ್ಚುವ ಯಂತ್ರಗಳನ್ನು ಇನ್ನೂ ಹಲವಾರು ಆವಿಷ್ಕಾರಗಳನ್ನು ಕಂಡುಹಿಡಿದಿದ್ದಾನೆ ಬುದ್ಧಿಶಕ್ತಿಯಿಂದ.

**ತ್ರಂತ್ರಜ್ಞಾನಿಗಳು** ರೇಡಿಯೋ ಮುಖಾಂತರ ಜಗತ್ತಿನ ಜನರ ಮಾತು, ಸಂಗೀತ, ಹಾಡುಗಳನ್ನು ಕೇಳಲು. ಟಿ ವಿ ಮೂಲಕ ದೃಶ್ಯ-ಶ್ರಾವ್ಯಗಳನ್ನು ನೋಡಲು, ಕೇಳಲು, ಕುಳಿತಲ್ಲೇ ನಿಂತಲ್ಲೇ ಮಲಗಿದಲ್ಲೇ ಪ್ರಯಾಣಿಸುವಲ್ಲೇ ಜಗತ್ತಿನ ಯಾವುದೇ ದೇಶದಲ್ಲಿದ್ದರೂ ಮಾತನಾಡಲು ದೃಶ್ಯಗಳನ್ನು ನೋಡಲು, ಸಂದೇಶಗಳನ್ನು ಆಗಿಂದಾಗಲೇ ರವಾನಿಸಲು ಪಡೆಯಲು ಮೊಬೈಲ್ ಫೋನ್‌ಗಳನ್ನು ಕಂಡು ಹಿಡಿದಿದ್ದಾರೆ. ಮುಂದುವರಿದು ಸೋಜಿಗವೆಂದರೆ ಜಗತ್ತೆ ಕೈಯಲ್ಲಿದೆ ಎಂಬುವಂತೆ ಸುಂದರವಾದ ಸ್ಮಾರ್ಟ್‌ಫೋನ್‌ಗಳನ್ನು ಕೈಯಲ್ಲಿಯೇ ಕೊಟ್ಟು ಮಾನವನಿಗೂ ವಿಸ್ಮಯವಾದ ಸೌಲಭ್ಯಗಳನ್ನು







ಒದಗಿಸಿದ್ದಾರೆ ಬುದ್ಧಿಶಕ್ತಿಯಿಂದ.

**ಸಾಮಾಜಿಕವಾಗಿ** ಪ್ರತಿಯೊಬ್ಬ ಮಾನವನಿಗೆ ಅವಶ್ಯಕವಾಗಿ ಬೇಕಾಗುವ, ಪಂಚಾಯತಗಳಾದ ಅನ್ನ, ಅರಿವೆ, ಆಶ್ರಯ, ಔಷಧಿ, ಅರಿವುಗಳನ್ನು ಒದಗಿಸಲು ಕೃಷಿ ಕ್ಷೇತ್ರದಲ್ಲಿ ವೈಜ್ಞಾನಿಕ, ತಂತ್ರಜ್ಞಾನವನ್ನು ಬಳಸಿ ಹೆಚ್ಚಾಗಿ ಉತ್ಪಾದಿಸಲು ಒಳ್ಳೊಳ್ಳೆ ಬೀಜಗಳನ್ನು, ಗೊಬ್ಬರಗಳನ್ನು, ನೀರನ್ನು, ವಿದ್ಯುತ್ತನ್ನು, ಉಪಕರಣಗಳನ್ನು ಒದಗಿಸಿದ್ದಾರೆ. ತರ-ತರಹದ ಬಟ್ಟೆಗಳನ್ನು ಉಪಯೋಗಿಸಲು ಪೂರೈಸಿದ್ದಾರೆ. ವಾಸಿಸಲು ಮನೆಗಳನ್ನು ನಿರ್ಮಿಸಿಕೊಳ್ಳಲು ಸಹಾಯ ಸಹಕಾರಗಳನ್ನು ನೀಡಿದ್ದಾರೆ. ಅಲೋಪಥಿಕ್, ಹೋಮಿಯೋಪಥಿಕ್, ನೈಸರ್ಗಿಕ, ಆಯುರ್ವೇದಿಕ್ ಔಷಧಿಗಳನ್ನು ಕಂಡುಹಿಡಿದು ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಉಪಕರಣಗಳನ್ನು ಕಂಡುಹಿಡಿದಿದ್ದಾನೆ, ಒದಗಿಸಿದ್ದಾನೆ. ಇನ್ನು ಲೌಕಿಕವಾಗಿ ಜ್ಞಾನವನ್ನು ಸಂಪಾದಿಸಲು ಪುಸ್ತಕಗಳನ್ನು ಓದಿ, ಪಾಠಗಳ ಮುಖಾಂತರ ಬೇಬಿಕೇರ್, ಅಂಗನವಾಡಿ, ಪ್ರಾಥಮಿಕ, ಮಾಧ್ಯಮಿಕ, ಮಹಾವಿದ್ಯಾಲಯ, ವಿಶ್ವವಿದ್ಯಾಲಯಗಳ ಮುಖಾಂತರ ರಾಷ್ಟ್ರೀಯ, ಅಂತರ ರಾಷ್ಟ್ರೀಯ, ವಿಶ್ವವಿದ್ಯಾಲಯಗಳ ಮೂಲಕ ಹೆಚ್ಚಿನ ವ್ಯಾಸಂಗಕ್ಕಾಗಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿದ್ದಾರೆ. 40–50 ತರಹ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿ ಸಾಧಿಸಿದ್ದಾನೆ ಬುದ್ಧಿಶಕ್ತಿಯಿಂದ.

**ರಾಜಕೀಯವಾಗಿ** ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯ, ದೇಶ, ವಿದೇಶ, ವಿಶ್ವವನ್ನು ಆಳಲು ಸಂವಿಧಾನಗಳನ್ನು ರಚಿಸಿಕೊಂಡು ಪ್ರಭುತ್ವವನ್ನು ಸಾಧಿಸಿದ್ದಾನೆ ಬುದ್ಧಿಶಕ್ತಿಯಿಂದ.

**ಧಾರ್ಮಿಕವಾಗಿ** ಒಬ್ಬೊಬ್ಬ ಪ್ರವಾದಿ ಅವತರಿಸಿ ಒಂದೊಂದು ಧರ್ಮವನ್ನು ವೈಜ್ಞಾನಿಕವಾಗಿ, ವೈಚಾರಿಕವಾಗಿ ಸರಳ ಹಾಗೂ ಸಹಜವಾಗಿ ಬೋಧಿಸಿ ತಾವು ಅನುಸರಿಸಿ ಅನುಷ್ಠಾನಿಸಿ ಆಚರಿಸಲು ಧರ್ಮಮಾರ್ಗದಲ್ಲಿ ನಡೆಯಲು ಕರುಣಿಸಿದ್ದಾರೆ. ಜಗತ್ತಿನ ಮಾನವರಿಗೆಲ್ಲ ಉದಾ. ಸ್ವದೇಶಿ ಧರ್ಮಗಳಾದ ವೈದಿಕ, ಶೈವ, ಜೈನ, ಬೌದ್ಧ, ಲಿಂಗಾಯತ, ಸಿಖ್ ಹಾಗೂ ವಿದೇಶೀ ಧರ್ಮಗಳಾದ ಇಸ್ಲಾಂ, ಕ್ರೈಸ್ತ, ಫಾರ್ಸಿ ಧರ್ಮಗಳು ಬೇರೆ ಬೇರೆ ಆಚರಣೆಗಳು ಬೇರೆ ಬೇರೆ. ಆದರೆ ಉದ್ದೇಶ ಮಾತ್ರ ಮಾನವನ ಕಲ್ಯಾಣ. ಇದೂ ಸಹಿತ ಬುದ್ಧಶಕ್ತಿಯಿಂದ ಆದದ್ದು.

**ಸಾಂಸ್ಕೃತಿಕವಾಗಿ** ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿ ಅಂತಾ ಬೇರೆ ಬೇರೆಯಾಗಿದೆ. ಸಾಕಷ್ಟು ಅಂತರವನ್ನು ಕಾಣುತ್ತೇವೆ. ಪಾಶ್ಚಿಮಾತ್ಯ ಸಂಸ್ಕೃತಿ ಏಕರೂಪಾಗಿದೆ, ಪೌರ್ವಾತ್ಯ ಅಂದರೆ ವಿಶೇಷವಾಗಿ ಭಾರತೀಯ ಸಂಸ್ಕೃತಿ ಜಗತ್ತಿನಲ್ಲಿಯೇ ವಿವಿಧತೆಯಲ್ಲಿ ಏಕತೆಯಿಂದೆ ಕೂಡಿದೆ. ಇದೂ ಸಹಿತ ಬೌದ್ಧಿಕ ಸಂಪನ್ನತೆಯಿಂದ ಕೂಡಿದೆ.

**ಸಾಹಿತ್ಯಿಕವಾಗಿ** ಅವಲೋಕನ ಮಾಡಿ ನೋಡಿದಾಗ ಆಯಾ ಭಾಷೆಯ, ಧರ್ಮದ, ಆಚರಣೆಗಳ ಮುಖಾಂತರ ಪರಿಚಯವಾಗಿ ತಮಗಿಷ್ಟ ಬಂದದ್ದನ್ನು ಆಯ್ಕೆ ಮಾಡಿಕೊಳ್ಳಬಹುದು. ಇದೂ ಸಹಿತ ಅವರವರ ಬುದ್ಧಿಶಕ್ತಿಯ ಮೂಲಕ.


**ಆಧ್ಯಾತ್ಮಿಕವಾಗಿ** ಎಲ್ಲಾ ದಾರ್ಶನಿಕರ, ಪ್ರವಾದಿಗಳ ಉದ್ದೇಶ ಒಂದೆಯಾಗಿದೆ. ದೇವನೊಬ್ಬನೆ ತಂದೆ. ಅವನ ಮಕ್ಕಳೆಲ್ಲ ನಾವೆಲ್ಲರೂ ಎಂಬುದು. ಅವರವರ ಅನುಯಾಯಿಗಳು ಅವರ ಧರ್ಮಗುರುಗಳ ಆಶಯದಂತೆ ನಡೆದದ್ದೇ ಆದರೆ ಈ ಜಗತ್ತು ಸುಖದ ಶಾಂತಿಯ ಸಮಾಧಾನದ ನೆಮ್ಮದಿಯ ತಾಣವಾಗುವುದು. ಒಂದೊಂದು ಧರ್ಮಗಳು ಪ್ರಾರ್ಥನೆಗೆ, ಧ್ಯಾನಕ್ಕೆ ಒತ್ತು-ಕೊಟ್ಟರೆ ನಿರಾಕಾರ, ನಿರಂಜನ, ನಿರವಯವ ಪರಂಜ್ಯೋತಿ ಸ್ವರೂಪ ಪರಮಾತ್ಮನ ಪೂಜೆಯನ್ನು ಮಾಡಲು ಹೇಳಿ ಅಂತಹದೇ ರೂಪವನ್ನು ಕೊಟ್ಟು ಸಾಕಾರವಾಗಿ ಕರುಣಿಸಿದ ಧರ್ಮ ಯಾವುದಾದರೂ ಜಗತ್ತಿನಲ್ಲಿಯೇ ಇದ್ದರೆ ಅದು ಬಸವ

ಪುಟ ರಲ್ಲಿ ಮುಂದುವರಿಯುವುದು

# ಮಹಾನ್ ಶರಣ

# ಅಂಬಿಗರ ಚೌಡಯ್ಯ

## ಜಯಂತಿ ಜ.20



ಅಂಬಿಗರ ಚೌಡಯ್ಯ 12ನೇ ಶತಮಾನದ ಬಸವಣ್ಣನವರ ಅನುಯಾಯಿ ಶರಣ. ಸಾವಿರಾರು ವರ್ಷಗಳಿಂದ ಧರ್ಮ ದೇವರ ಬಗೆಗೆ ಜನ ಸಮೂಹದಲ್ಲಿದ್ದ ಮೂಢನಂಬಿಕೆಗಳನ್ನೆಲ್ಲ ಗುರು ಬಸವಣ್ಣನವರೊಂದಿಗೆ ಅಂಬಿಗರ ಚೌಡಯ್ಯ ಹೊಡೆದೋಡಿಸುತ್ತಲೇ ವಿಚಾರ ಪರವಾದ, ವಾಸ್ತವವಾದ ಅಂಶಗಳನ್ನು ಜನಮನದಲ್ಲಿ ಮೂಡಿಸಿದರು.

ಈತನ ಜನ್ಮಸ್ಥಳ ಗುಲ್ಬರ್ಗ ಜಿಲ್ಲೆಯ ಅಫಜಲ್‌ಪುರ ತಾಲೂಕಿನ ಚೌಡದಾನಪುರವೆಂದು ಸಂಶೋಧಕರು ಹೇಳಿದ್ದಾರೆ.

ಧರ್ಮ-ದೇವರು ಕೇವಲ ಶ್ರೀಮಂತರ ಸೋತ್ತಾಗಿದ್ದ ಅಂದಿನ ಸಂದರ್ಭದಲ್ಲಿ ಪೂಜೆ ಮೋಕ್ಷ ಕೇವಲ ನೇಮವಂತರ, ಬ್ರಾಹ್ಮಣರ ಗುತ್ತಿಗೆಯಾಗಿದ್ದ ಸಮಯದಲ್ಲಿ ಭಾಷ್ಯಕಾರರು ಹೇಳಿದ್ದೇ ಸರಿಯೆನ್ನುವ ವ್ಯವಸ್ಥೆಯಲ್ಲಿ ಚೌಡಯ್ಯ ಈ ಮೂವರನ್ನು ಕ್ರೂರ ಕರ್ಮಿಗಳೆಂದು, ಸಂದೇಹಿಗಳೆಂದು ಕಟುವಾಗಿ ಟೀಕಿಸುವುದರ ಮೂಲಕ ಇವರು ಹೋದ ದಾರಿಯಲ್ಲಿ ಯಾರೂ ಹೋಗ ಬಾರದೆಂದು ಸ್ಪಷ್ಟಪಡಿಸುತ್ತಾನೆ. ಇವರ ವಚನಗಳು ತುಂಬಾ ಖಾರವಾಗಿರುವುದು ಅವರ ಆತ್ಮ ಬಲವನ್ನು ಹಾಗೂ ಸತ್ಯವನ್ನು ಪ್ರತಿಪಾದಿಸುವಲ್ಲಿ ಹೊಂದಿದ್ದ ಧೈರ್ಯವನ್ನು ತೋರಿಸುತ್ತವೆ.

ಕಲ್ಯಾಣದ ಶಿವಶರಣರ ಮಧ್ಯದಲ್ಲಿ ಪ್ರಜ್ವಲವಾಗಿ ಬೆಳಗಿದ ಅಂಬಿಗರ ಚೌಡಯ್ಯ ಅವರು ಮಾತು ಕಟುವಾದರೂ ದಿಟವನ್ನೆ ನುಡಿದ ದಿಟ್ಟನೀತ ನುಡಿದಂತೆ ನಡೆದವನು, ಈತ ಒಳ್ಳೆಯ ವಚನಕಾರ, ಸುಮಾರು ಈತನ 278 ವಚನಗಳು ದೊರಕಿವೆ. ವಚನಾಂಕಿತವನ್ನು ತನ್ನ ಹೆಸರಿನಲ್ಲೆ ಬಳಸಿದ್ದಾನೆ.

ಏಕದೇವೋಪಾಸನೆ, ದೇವಾಲಯ ಗುಡಿಗುಂಡಾರ ವಿರೋಧಿಯಾದ ಚೌಡಯ್ಯ ಇಷ್ಟಲಿಂಗಪೂಜೆ ಪ್ರತಿಯೊಬ್ಬರು ಮಾಡಬೇಕು. ಇಲ್ಲಿ ಯಾವ ಭೇಧಭಾವ ಇಲ್ಲ. ದೇಹವನ್ನೇ ದೇವಾಲಯವಾಗಿಸಿಕೊಳ್ಳಲು ಅದು ಸಾಧನ ಎಂದನು. ಇಷ್ಟಲಿಂಗ ಪೂಜಿಸದೆ ಸ್ಥಾವರಲಿಂಗ ಪೂಜೆ ನಿಷಿದ್ಧ ಎಂದು ತಿಳಿಸಿದನು.

ಅಂಬಿಗರ ಚೌಡಯ್ಯ ಅವರ ಅಧ್ಯಯನಕ್ಕಾಗಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ "ಅಂಬಿಗರ ಚೌಡಯ್ಯ ಅಧ್ಯಯನ ಪೀಠ" ಸ್ಥಾಪಿಸಲಾಗಿದೆ. ಆದರೆ ತುಂಬಾ ದುಃಖದ ಸಂಗತಿ ಎನೆಂದರೆ ಯಾರೋ ಒಬ್ಬ ಸ್ವಾಮೀಜಿಯವರು ಕೊರಳಲ್ಲಿ ಇಷ್ಟಲಿಂಗ ಹಾಗು ಹಣೆಯಲ್ಲಿ ವಿಭೂತಿಯನ್ನೆ ತೆಗೆದು ಪ್ರಕಟಿಸಿರೋದು ತಪ್ಪಾಗಿದೆ.





# ಇಷ್ಟಲಿಂಗೋಪಾಸನೆ

## ವೈಜ್ಞಾನಿಕ ಅರಿವು

ಧರ್ಮ, ಶರಣ ಧರ್ಮ, ವಚನ ಧರ್ಮ, ಲಿಂಗಾಯತ ಧರ್ಮ. ಇದರ ನಿರ್ಮಾಪಕರು, ಪ್ರವಾದಿಗಳು, ಪರಿಪೂರ್ಣ ಸದ್ಧರ್ಮ, ಮಾನವ ಧರ್ಮ, ರಾಷ್ಟ್ರಧರ್ಮ, ವಿಶ್ವಧರ್ಮದ ದ್ರಷ್ಟಾರರು ವಿಶ್ವಗುರು ಬಸವಣ್ಣನವರು. ಪೂಜೆಗೆ 33 ಮಾರ್ಕ್ಸ್, ಪ್ರಾರ್ಥನೆಗೆ 33 ಮಾರ್ಕ್ಸ್, ಧ್ಯಾನಕ್ಕೆ 33 ಮಾರ್ಕ್ಸ್ ಹಾಗೂ ಭಕ್ತಿ, ಶ್ರದ್ಧೆ, ನಿಷ್ಠೆ, ಶರಣಾಗತಿಯಿಂದ ಮಾಡಿದಾಗ ಗ್ರೇಸ್ ಮಾರ್ಕ 1 ನ್ನು ಸೇರಿಸಿದಾಗ ನೂರಕ್ಕೆ ನೂರರಷ್ಟು ಮಾರ್ಕ್ಸ್ ತೆಗೆದುಕೊಳ್ಳುವವರು ಲಿಂಗಾಯತ ಧರ್ಮೀಯರು.

ಇದೂ ಸಹಿತ ಬೌದ್ಧಿಕ ಶಕ್ತಿಯ ಪ್ರಾಮಾಣಿಕತೆಯಿಂದ ಆಗುವಂತಹುದು. ಈ ವರೆಗೆ ಹೇಳಿದುದೆಲ್ಲವೂ ಬುದ್ಧಿಯ ಪ್ರಸಾದ ಭೋಗ.

ಇನ್ನು ಚಿತ್ತದ ಬಗ್ಗೆ ವಿಶ್ಲೇಷಿಸೋಣ. ನೋಡಿದ ಎಲ್ಲ (ರೂಪ) ಚಿತ್ರಗಳನ್ನು ಕೇಳಿದ ಎಲ್ಲ ನುಡಿ-ಮಾತುಗಳನ್ನು, ವಾಸಿಸಿದ ಎಲ್ಲ ಪದಾರ್ಥಗಳನ್ನು ರುಚಿಸಿದ ಎಲ್ಲ ವಸ್ತುಗಳನ್ನು ಮತ್ತು ಆಡಿದ ಎಲ್ಲ ಮಾತುಗಳನ್ನು, ಸ್ಪರ್ಶಿಸಿದ ಎಲ್ಲ ಕ್ಷಣಗಳನ್ನು ಗ್ರಹಿಸಿಕೊಂಡು ಉಗ್ರಾಣದಂತೆ ಸಂಗ್ರಹಿಸಿ ಇಟ್ಟುಕೊಂಡುದೇ ಚಿತ್ತ. ಈಗ ಹೇಳಿದ ತಿಳಿಸಿದ ಎಲ್ಲದರಲ್ಲಿ ಒಳ್ಳೆಯದನ್ನು ಮಾತ್ರ ಬಳಸಿ, ಉಳಿಸಿಕೊಂಡು ಸನ್ಮಾರ್ಗದತ್ತ ಕ್ರಮಿಸಿ ದೇವನೆಡೆಗೆ ಸಾಗುವುದೇ ಚಿತ್ತದ ಪ್ರಸಾದ ಭೋಗ.

ಕೊನೆಯದಾಗಿ ಅಹಂಕಾರ ಇದರ ಪಾತ್ರ ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಅಂತಃಕರಣಗಳಲ್ಲಿ ಹಿರಿದಾದುದು. ಇದಕ್ಕೆ ಪೂರಕವಾದುದು ಒಂದೇ ಒಂದು ವಚನ ಆಲಿಸಿರಿ:

**" ಅಹಂಕಾರವನೆ ಮರೆದು**
**ದೇಹಗುಣಂಗಳನೆ ಜರಿದು**
**ಇಹ ಪರವು ತಾನೆಂದು ಅರಿದ ಕಾರಣ**
**ಸೋಹಂ ಭಾವವು ಸ್ವಸ್ಥಿರವಾಗಿ**
**ಸಹಜ ಉದಯದ ನಿಲವಿಂಗೆ**
**ಮಹಾಘನಲಿಂಗದ ಬೆಳಗು**
**ಸ್ವಾಯತವಾದ ಕಾರಣ, ಗುಹೇಶ್ವರಾ**
**ನಿಮ್ಮ ಶರಣ ಉಪಮಾತೀತ ನೋಡಯ್ಯಾ"**

ಎಂದು ವ್ಯೋಮಕಾಯಸಿದ್ಧ ಅಲ್ಲಮಪ್ರಭುದೇವರು ಅಹಂಕಾರದ ಪ್ರಸಾದ ಭೋಗದ ಸ್ಥಿತಿಯನ್ನರುಹಿದ್ದಾರೆ. ಇವಿಷ್ಟು ಪ್ರಸಾದ ಭೋಗಕ್ಕೆ ಸಂಬಂಧಿಸಿದವುಗಳಾಗಿವೆ. ಕೊನೆಯದಾಗಿ ಲಿಂಗಯೋಗದ ವಿಷಯಕ್ಕೆ ಬರೋಣ. ವಾಕ್, ಪಾಣಿ, ಪಾದ, ಗುದ, ಗುಹ್ಯ ವೆಂಬ ಕರ್ಮೇಂದ್ರಿಯಗಳ ಲಿಂಗಯೋಗವೆಂತೆಂದರೆ :

**ವಾಕ್ :** "ಮಾತು ಬೆಳ್ಳಿ, ಮೌನ ಬಂಗಾರ" ಎಂಬುದು ಉಕ್ತಿ. ಬೆಳ್ಳಿ ಎಷ್ಟು ಶುಭ್ರವಾಗಿದೆಯೋ ಅಷ್ಟು ಶುಭ್ರತೆಯಿಂದ ಪರಿಶುದ್ಧತೆಯಿಂದ ಕೂಡಿರಬೇಕು. ಮಾತುಗಳು ಜ್ಞಾನ ಜ್ಯೋತಿಯನ್ನು ಹೊತ್ತಿಸುವಂಥವುಗಳಾಗಿರಬೇಕು. ಅದಕ್ಕೆ ವಚನ ಸಾಕ್ಷಿಯಾಗಿದೆ.

ಮುಂದುವರಿಯುವುದು...

*** ಓದುಗರಿಗೆ ವಿಶೇಷ ಸೂಚನೆ ***

ಕಲ್ಯಾಣ ಕಿರಣ ಮಾಸಪತ್ರಿಕೆ ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ. ನವೀಕರಿಸಿರಿ.
**ವಿ.ಸೂ:** ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಶರಣ ಮೇಳ (ಕಲ್ಯಾಣಪರ್ವ)ದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ.
**ಮಾಹಿತಿಗಾಗಿ ಸಂಪರ್ಕಿಸಿ**
**9945806297**






ಕಲ್ಯಾಣ ಕಿರಣ

ಸುಮಧುರ

ಕ್ಷಣಗಳು














ಲಿಂಗಾಯತ ಗಣಮೇಳದ

ಸುಮಧುರ

ಕ್ಷಣಗಳು




## ವಚನವಾಣಿ

ಮಾತೆ ಕಸ್ತೂರಿದೇವಿ

ಅಂಕ ಕಳನೇರಿ ಕೈಮರೆದಿರ್ದಡೆ
ಮಾರಂಕ ಬಂದಿರಿವುದ ಮಾಣ್ಬನೆ?
ನಿಮ್ಮ ನೆನಹ ಮ(ತಿ)ನ ಮರೆದಿರ್ದಡೆ
ಮಾಯೆ ತನುವನಂಡಲೆವುದ ಮಾಣ್ಬುದೆ? ಲಿಂಗದೇವನ ನೆನೆದಡೆ,
ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ.

– ಬಸವಣ್ಣನವರು (ಬ.ವ.ದೀ–180)

ಅದೊಂದು ಸುಮಾರು 45 ರಿಂದ 50 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದ ಪದವಿ ತರಗತಿ. ಈ ತರಗತಿಯ ವಿದ್ಯಾರ್ಥಿಗಳಿಗೆ ಬಿ.ಪುಟ್ಟಸ್ವಾಮಯ್ಯನವರು ಬರೆದ 'ಪ್ರಭುದೇವ' ಎಂಬ ಕಾದಂಬರಿ ಪಠ್ಯವಾಗಿತ್ತು. ವಾರದಲ್ಲಿ 2 ದಿನ ಮಾತ್ರ ಕನ್ನಡ ಅಧ್ಯಾಪಕರು ತರಗತಿ ತೆಗೆದುಕೊಳ್ಳುತ್ತಿದ್ದರು. ಅಲ್ಲಮರು ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಮದ್ದಲೆ ಬಾರಿಸುವ ಅಧ್ಯಾಯದವರೆಗೂ ಪಾಠ ಮಾಡಿದ್ದರು. ಮುಂದಿನ ತರಗತಿಗೆ ಅಲ್ಲಮರ ಜೀವನದಲ್ಲಿ ಮಾಯೆ ಪ್ರವೇಶ ಮಾಡುವ ಪಾಠ ಮಾಡಬೇಕಿತ್ತು. ಅಂತೆಯೆ ಆ ದಿನವೂ ಬಂತು. ಎಂದಿನಂತೆ ಪಾಠ ಮಾಡುವ ಹುರುಪಿನಿಂದ ಅಧ್ಯಾಪಕರು ತರಗತಿಯನ್ನು ಪ್ರವೇಶಿದರು. ಅಭ್ಯಾಸ ಬಲದಂತೆ ಪಾಠ ಮಾಡುವ ಮುನ್ನ ಹಾಜರಾಗಿದ್ದ ವಿದ್ಯಾರ್ಥಿಗಳನ್ನು ಅವಲೋಕಿಸಿದರು. ಏನಾಶ್ಚರ್ಯ !!.









45–50 ವಿದ್ಯಾರ್ಥಿಗಳಲ್ಲಿ ಪ್ರತಿದಿನ ತರಗತಿಗೆ ಹಾಜರಾಗುತ್ತಿದ್ದುದು ಕೇವಲ 20–25 ವಿದ್ಯಾರ್ಥಿಗಳು ಮಾತ್ರ, ಉಳಿದ ಅಶಿಸ್ತಿನ ವಿದ್ಯಾರ್ಥಿಗಳು ತರಗತಿಗೆ ಹಾಜರಾಗದೆ ಗುಂಪು ಕಟ್ಟಿ-ಕೊಂಡು ಸಿನಿಮಾ ಮಂದಿರಗಳಲ್ಲಿ, ಹುಡುಗಿಯರ ಹಿಂದೆ ಸುತ್ತಾಡುವುದರಲ್ಲಿ, ಬೀದಿ ತಿರುಗುವುದರಲ್ಲಿ ಇನ್ನಿತರ ಪಠ್ಯೇತರ ಚಟುವಟಿಕೆಗಳಲ್ಲಿ ಕಾಲಹಾಕುತ್ತಿದ್ದರು. ಆದರೆ ಇಂದು ಮಾತ್ರ 50 ವಿದ್ಯಾರ್ಥಿಗಳು ಒತ್ತಟ್ಟಿಗಿರಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಸ್ನೇಹಿತರನ್ನು ಕರೆದುಕೊಂಡು ಬಂದು ತರಗತಿಯಲ್ಲಿ ಕುಳಿತುಕೊಳ್ಳಲು ಜಾಗವಿಲ್ಲದೆ ಸುತ್ತಲೂ ನಿಂತಿದ್ದನ್ನು ಗಮನಿಸಿದರು. ತಮ್ಮ ಮನಸ್ಸಿನಲ್ಲಿ 'ಇದುವರೆಗೂ ನಾವು ಏನೆಲ್ಲಾ ನಿಯಮಗಳನ್ನು ರೂಪಿಸಿ ಪ್ರಯತ್ನಿಸಿದರೂ ಗೈರುವಿದ್ಯಾರ್ಥಿಗಳನ್ನು ತರಗತಿಗೆ ಕರೆತರಲು ಆಗಿರಲಿಲ್ಲ! ಅಂದಾಗ ಆ ಕೆಲಸವನ್ನು ಮಾಯೆ ಅದೆಷ್ಟು ಸುಲಭವಾಗಿ ಮಾಡಿದೆಯಲ್ಲ! ಭಲೇ ಮಾಯೆ!' ಎಂದುಕೊಳ್ಳುತ್ತಾ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹೇಳಿದ್ದು ಹೀಗೆ 'ನನ್ನ ಪ್ರಿಯ ವಿದ್ಯಾರ್ಥಿಗಳೆ, ಈ ದಿನ ಅಲ್ಲಮರ ಜೀವನದಲ್ಲಿ ಮಾಯೆ ಪ್ರವೇಶ ಮಾಡುವ ಪಾಠ ಮಾಡಬೇಕಿತ್ತು. ಆದರೆ ಈಗಾಗಲೆ ನೀವೆಲ್ಲ ಅಂಥ ಪ್ರಬಲ ಶಕ್ತಿಯಾದ ಮಾಯೆಯೊಳಗೆ ಬಿದ್ದು ಹೊರಳಾಡುತಿದ್ದಿರಿ ಮತ್ತು ನಾನು ವಿವರಿಸುವುದಕ್ಕಿಂತಲೂ ಹೆಚ್ಚಾಗಿ ಮಾಯೆಯನ್ನು ಅನುಭವಕ್ಕೆ ತಂದುಕೊಂಡಿದ್ದೀರಿ. ಈ ಕಾರಣಕ್ಕಾಗಿ ನಿಮಗೆ ಮಾಯೆಯನ್ನು ಪರಿಚಯಿಸುವ ಅಥವ ಅರ್ಥೈಸುವ ಅಗತ್ಯವಿಲ್ಲ ಎಂದು ಭಾವಿಸುತ್ತೇನೆ' ಎಂದು ಮುಂದಿನ ಪಾಠ ಮಾಡಲು ಪುಸ್ತಕವನ್ನು ಕೈಗೆತ್ತಿಕೊಂಡಾಗ ಪಾಪ!..ಎಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಿದ್ದ ವಿದ್ಯಾರ್ಥಿಗಳಿಗೆ ಆದ ನಿರಾಸೆ ಅಷ್ಟಿಷ್ಟಲ್ಲ..?!

ಅಧ್ಯಾಪಕರಂತೆ ಪಲಾಯನಗೈಯದೆ, ಹಾಜರಿ ಪುಸ್ತಕದಿಂದ ಬಹು ದೂರ ಉಳಿದ ವಿದ್ಯಾರ್ಥಿಗಳನ್ನು ತನ್ನ ಪ್ರಭಾವದಿಂದ ಕ್ಷಣ ಮಾತ್ರದಲ್ಲಿ ವಶಮಾಡಿ ಹಿಡಿತಂದು ತರಗತಿಯಲ್ಲಿ ಕೂಡಿಸಿದ್ದ ಮಾಯೆಯ ಅಸ್ತಿತ್ವ ಮತ್ತು ಸ್ವರೂಪವನ್ನು ನಮ್ಮ ವಚನಕಾರರು ಹೇಗೆ ಬಣ್ಣಿಸಿದ್ದಾರೆ ಮತ್ತು ವ್ಯಾಖ್ಯಾನಿಸಿದ್ದಾರೆ ಎಂದು ತಿಳಿಯೋಣ. ಮಾತ್ರವಲ್ಲ ಈ ಮಾಯೆಯ ಪರಿಕಲ್ಪನೆಯನ್ನು ನಮಗೆ ಯಾವ ರೀತಿ ಮನಗಾಣಿಸಿದ್ದಾರೆ ಎಂದು ಅವರ ಮಾತಿನಲ್ಲೆ ಕೇಳೋಣ. ಜಗತ್ತಿನ ಎಲ್ಲಾ ಧರ್ಮಗಳಲ್ಲು ಮಾಯೆಯ ಪ್ರಸ್ತಾಪವಿದೆ. ಎಲ್ಲರೂ ಮಾಯೆಯನ್ನು ಭ್ರಮೆ, ಭ್ರಾಂತಿ ಎಂದೇ ಭಾಷಾಂತರಿಸಿದ್ದಾರೆ. ಕನ್ನಡ ನಿಘಂಟುವಿನಲ್ಲಿ ಇಂದ್ರಜಾಲ(ಟಚಿರುಛಿ), ಮೋಸ, ವ್ಯಾಮೋಹ, ಅಜ್ಞಾನ, ಮಿಥ್ಯೆ ಎಂದೆಲ್ಲಾ ಅರ್ಥೈಸಲಾಗಿದೆ. ಕೆಲವೊಮ್ಮೆ ಮಾಯೆಯನ್ನು ಪಾರ್ವತಿದೇವಿಯ ಒಂದು ರೂಪ ಎನ್ನಲಾಗುತ್ತದೆ. ಇಂಥ ಅಗೋಚರವಾದ ಮಾಯೆಗೆ ನುಸುಳಲು ವಿಶಾಲವಾದ ದಾರಿಯೇ ಆಗಬೇಕೆಂದಿಲ್ಲ. ಕೂದಲೆಳೆಯಷ್ಟು ಅವಕಾಶ ಸಿಕ್ಕರೂ ಸಾಕು ನುಗ್ಗುತ್ತದೆ ಎನ್ನುತ್ತದೆ ವಚನ ವಾಣಿ. ಅದು ಹೇಗೆ ಎಂದು ಗುರು ಬಸವಣ್ಣನವರು ತಮ್ಮ ವಚನದಲ್ಲಿ ಸರಳವಾದ ಉಪಮೆಯ ಮೂಲಕ ವಿವರಿಸುತ್ತಾರೆ.

ತಾನೊಬ್ಬ ಶೂರ ಮತ್ತು ಯಶಸ್ವಿ ಸೈನಿಕನಾಗಬೇಕೆಂಬ ಮಹದಾಸೆಯಿಂದ ಸೂಕ್ತ ತರಬೇತಿ ಪಡೆದ ನಂತರ ಒದಗಿದ ಯುದ್ಧ ಒಂದರಲ್ಲಿ ಭಾಗವಹಿಸಲು ಅತ್ಯುತ್ಸಾಹ ಮತ್ತು ಅತಿಯಾದ ಆತ್ಮವಿಶ್ವಾಸದಿಂದ ರಣರಂಗವನ್ನು ಪ್ರವೇಶ ಮಾಡಿದ್ದಾನೆ. ಒಳ್ಳೆಯದು. ಆದರೆ ಅವನು ಮಾಡಿದ ದೊಡ್ಡ ತಪ್ಪೆಂದರೆ ಸರಿಯಾದ ಪೂರ್ವಸಿದ್ಧತೆಯಿಲ್ಲದೆ ಆತ್ಮರಕ್ಷಣೆಯ ಸಾಧನವಾದ ಗುರಾಣಿಯನ್ನು ಮರೆತು(ಇದೇ ಮಾಯೆ) ಕೇವಲ ಕತ್ತಿಯೊಂದನ್ನೆ ಹಿಡಿದು ಹೊರಟಿದ್ದು. ಇಂಥ ಸದವಕಾಶಕ್ಕಾಗಿಯೇ

ಕಾಯುತ್ತಿದ್ದ ಎದುರಾಳಿ(ವೈರಿ)ಗೆ ಸೈನಿಕನನ್ನು ಇರಿದು ಸೋಲಿಸುವುದು ಸುಲಭವಾಗುತ್ತದೆ. ಅದೇ ರೀತಿ ಮನಸ್ಸು ಎಂಬ ಸೈನಿಕ ಪರಮಾತ್ಮನ ನೆನಪು ಎಂಬ ಗುರಾಣಿಯನ್ನು ಮರೆತಾಗ ಮಾಡಿದ ಪಾಪಕರ್ಮಗಳು ಮಾಯೆಯ ರೂಪದಲ್ಲಿ ಬೆನ್ನು ಹತ್ತಿ ಕಾಡಲಾರಂಭಿಸುತ್ತವೆ. ಮಾನವನು ತಿಳಿದೊ/ ತಿಳಿಯದೆಯೋ ಎಷ್ಟೇ ಪಾಪ ಮಾಡಿರಲಿ ಅವನು ದೇವನನ್ನು ಹೃತ್ಪೂರ್ವಕವಾಗಿ ನೆನದಿದ್ದೇ ಆದರೆ ಮಾಡಿದ ಪಾಪಗಳೆಲ್ಲ ಉರಿಗೆ ಹಾಕಿದ ಅರಗಿನಂತೆ ನಿಶ್ಶೇಷವಾಗಿ ಕರಗುತ್ತದೆ ಎಂದು ಧರ್ಮಪಿತರು ಮಾಯೆ(ಪಾಪಕರ್ಮ)ಯಿಂದ ಪಾರಾಗುವ ಮಾರ್ಗ ತೋರಿಸುತ್ತಿದ್ದಾರೆ. ಇಲ್ಲಿ ಮಾಯೆಯು ಮರೆವು, ಅಜ್ಞಾನ, ಪಾಪಕರ್ಮಗಳ ರೂಪದಲ್ಲಿ ವ್ಯಕ್ತವಾಗುತ್ತಿದೆ ಎನ್ನಬಹುದು.

**ನಾನೊಂದ ನೆನೆದಡೆ ತಾನೊಂದ**
**ನೆನೆವುದು, ನಾನಿತ್ತಲೆಳೆದಡೆ**
**ತಾನತ್ತಲೆಳೆವುದು.**
**ತಾ ಬೇರೆ ಎನ್ನನಳಲಿಸಿ ಕಾಡಿತ್ತು,**
**ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು.**
**ಲಿಂಗದೇವನ ಕೂಡಿಹೆನೆಂದಡೆ**
**ತಾನೆನ್ನ ಮುಂದುಗೆಡಿಸಿತ್ತು ಮಾಯೆ**

ಬ.ವ.ದೀ–14

ಧರ್ಮಪಿತರು ತಮ್ಮ ವಚನದಲ್ಲಿ ಮಾಯೆಯ ಉಪಟಳವನ್ನು ಚಿತ್ರಿಸಿದ್ದಾರೆ. ಉದಯೋನ್ಮುಖನಾದ ಆದರ್ಶ ಸಾಗಕನು ಪರಮಾತ್ಮನನ್ನು ಭಕ್ತಿಶ್ರದ್ಧೆಯಿಂದ ನಂಬಿ ಧ್ಯಾನಕ್ಕೆ ಕುಳಿತರೆ ಅವನ ಮನಸ್ಸು ಮಾತ್ರ ಧ್ಯಾನಕ್ಕೆ ಸಹಕರಿಸದೆ ಮತ್ತೊಂದು ದಿಕ್ಕಿನಲ್ಲಿ ಸಾಗಲು ಯತ್ನಿಸುತ್ತದೆ. ಮತ್ತೆ ಮತ್ತೆ ಪ್ರಯತ್ನಿಸಿದಷ್ಟೂ ಅದು ಬೇರೆ ಕಡೆ ಹೋಗಲು ಹವಣಿಸುತ್ತದೆ. ಇದರಿಂದ ಸಾಧಕನಿಗೆ ದುಃಖ ದುಮ್ಮಾನದೊಂದಿಗೆ ಆಯಾಸ ಬಳಲಿಕೆಗಳು ಉಂಟಾಗುತ್ತದೆ. ಪರಮಾತ್ಮನನ್ನು ನೆನೆಯಲು ಅಡ್ಡಿಯಾಗುತ್ತಿರುವ ಮನಸ್ಸಿನ ಮೇಲೆ ಮುನಿಸು ಮೂಡುತ್ತದೆ. ಆದರೂ ದೃಢ ಮನಸ್ಸಿನಿಂದ ಮತ್ತೆ ಧ್ಯಾನಿಸಲು ಪ್ರಯತ್ನಿಸಿದರೆ ಮಾಯೆ ಅಡ್ಡ ಬಂದು ಧ್ಯಾನಭಂಗ ಮಾಡುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಲೆ ಇದ್ದು ಮನಸ್ಸಿನ ದಾರಿ ತಪ್ಪಿಸುತ್ತದೆ. ಇಲ್ಲಿ ಮನಸ್ಸಿಗೂ ಮಾಯೆಗೂ ನಿಕಟ ಸಂಬಂಧ ಇರುವುದನ್ನು ಗುರು ಬಸವಣ್ಣನವರು ಗುರುತಿಸಿದ್ದಾರೆ.

**ಪುರುಷನ ಮುಂದೆ ಮಾಯೆ**
**ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು.**
**ಸ್ತ್ರೀಯ ಮುಂದೆ ಮಾಯೆ**
**ಪುರುಷನೆಂಬ ಅಭಿಮಾನವಾಗಿ ಕಾಡುವುದು.**
**ಲೋಕವೆಂಬ ಮಾಯೆಗೆ ಶರಣಚಾರಿತ್ರ್ಯ**
**ಮರುಳಾಗಿ ತೋರುವುದು.**
**ಚೆನ್ನಮಲ್ಲಿಕಾರ್ಜುನ ದೇವನೊಲಿದ**
**ಶರಣಂಗೆ ಮಾಯೆಯಿಲ್ಲ, ಮರಹಿಲ್ಲ,**
**ಅಭಿಮಾನವೂ ಇಲ್ಲ.**

–ಜಗನ್ಮಾತಾ ಅಕ್ಕಮಹಾದೇವಿ

ಜಗನ್ಮಾತಾ ಅಕ್ಕಮಹಾದೇವಿ ಈ ಭೂಮಿಗೆ ಬರುವವರೆಗೂ ಹೆಣ್ಣು ಮಾತ್ರ ಮಾಯೆಯಾಗಿ ಕಾಡುತ್ತಾಳೆ ಎಂಬ ಅಪವಾದ ಸ್ತ್ರೀಕುಲದ ಮೇಲಿತ್ತು. ಈ ತಾಯಿ ಬಂದು ಪುರುಷನೂ ಸಹ ಮಾಯೆಯಾಗಿ ಕಾಡಬಲ್ಲ ಎಂಬುದನ್ನು ತೋರಿಸಿಕೊಟ್ಟರು. ಸ್ತ್ರೀಯು ಮಾಯೆಯೆಂಬ ಪೂರ್ವಾಗ್ರಹ ಪೀಡಿತ ಮನೋಭಾವದವರಿಗೆ ಜನ್ಮ ಕೊಟ್ಟ ತಾಯಿ, ಮಮತೆಯ ಮಗಳು, ಜೀವನ ಸಂಗಾತಿಯಾದ ಪತ್ನಿ ಒಡಹುಟ್ಟಿದ ಸೋದರಿಯರಲ್ಲದೆ ಇಡೀ ಸ್ತ್ರೀಕುಲವನ್ನೆ ಮಾಯೆ ಎಂದು ಭಾವಿಸಿ ತಿರಸ್ಕಾರದಿಂದ ದೂರ ಸರಿಯುವುದನ್ನು ಕಾಣುತ್ತೇವೆ. ಈ ಏಕಪಕ್ಷೀಯವಾದ ಲೋಕದೃಷ್ಟಿಯನ್ನು ಬದಲಿಸುವಂತೆ ಅಕ್ಕಮಹಾದೇವಿಯವರು ವ್ಯಾಖ್ಯಾನಿಸುತ್ತಾರೆ. ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು–ಇಲ್ಲಿ ದುರ್ಬಲ ಮನಸ್ಸಿನ ಪುರುಷನಿಗೆ ಹೆಣ್ಣು ಮಾಯೆಯಾಗಿ ಕಾಡಿದಂತೆ 'ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡುವುದು'– ದುರ್ಬಲ ಮನಸ್ಸಿನ ಸ್ತ್ರೀಗೆ







ಪುರುಷನು ಮಾಯೆಯಾಗಿ ಕಾಡುತ್ತದೆ! ದುರ್ಬಲ ಮನಸ್ಸಿನ ಸ್ತ್ರೀಪುರುಷರು ಪರಸ್ಪರ ಮಾಯೆ ಎಂಬುದನ್ನು ಅಕ್ಕನವರು ದೃಢಪಡಿಸುತ್ತಿದ್ದಾರೆ. ಮಾಯೆಯನ್ನು ಕುರಿತ ಸಮನ್ವಯ ತತ್ವವನ್ನು ನಮಗೆ ಬೋಧಿಸಿದ್ದಾರೆ. ಶರಣರ ಈ ಹೊಸ ದೃಷ್ಟಿಕೋನ, ತತ್ವಗಳನ್ನೊಳಗೊಂಡ ಶುದ್ಧ ಚಾರಿತ್ರ್ಯ ಲೋಕದ ಜನರ ಕಣ್ಣಿಗೆ ಮರುಳಾಗಿ ತೋರುತ್ತಿದೆ. ಇತ್ತೀಚೆಗೆ ಸಾಮಾಜಿಕ ಸಂಪರ್ಕ ಹೆಚ್ಚಾದಷ್ಟು ಈ ಸ್ತ್ರೀಪುರುಷ ಮಾಯೆಯ ಕಾರ್ಯವ್ಯಾಪ್ತಿ ವಿಸ್ತಾರವಾಗುತ್ತಿದೆ. ಅದರಲ್ಲೂ ಅಂತರ್ಜಾಲ(internet), ಮೊಬೈಲ್ ಮೂಲಕ ಗುರುತು, ಪರಿಚಯ, ಹಿನ್ನೆಲೆ ಯಾವುದು ಗೊತ್ತಿಲ್ಲದ ಸ್ತ್ರೀಪುರುಷರ ಪರಸ್ಪರ ಆಕರ್ಷಣೆ ಮತ್ತು ಸಂಪರ್ಕಗಳು ಹೆಚ್ಚಾಗಿ ವೈಯಕ್ತಿಕ ಜೀವನದಲ್ಲಿ ತೊಂದರೆಗಳು ಜಾಸ್ತಿಯಾಗುತ್ತಿವೆ. ಇಂಥ ವಿದ್ಯುನ್ಮಾನ ಮಾಯಾಜಾಲಕ್ಕೆ ವಿದ್ಯಾವಂತ ಯುವಕಯುವತಿಯರೇ ಹೆಚ್ಚಾಗಿ ಸಿಕ್ಕಿ ಬೀಳುತ್ತಿರುವುದು ವಿಪರ್ಯಾಸ.

ಆದರೆ ಪರಮಾತ್ಮನ ಕೃಪೆಗೆ ಪಾತ್ರರಾದ ಶರಣರ ಬಳಿ ಮಾಯೆಗೆ ಸುಳಿಯಲು ಜಾಗವಿಲ್ಲ; ಮಾಯೆ ಎಂಬುದು ನಿಜವಲ್ಲ; ಅದು ಬರಿ ಭ್ರಮೆ ಎಂದರಿತ ಶರಣರಿಗೆ ಈ ಬಗ್ಗೆ ಅಜ್ಞಾನವೂ ಇಲ್ಲ; ಅಷ್ಟೇ ಅಲ್ಲ ಇಂಥ ಮಾಯೆ ಮತ್ತು ಮರೆವನ್ನು ಮೆಟ್ಟಿ ನಿಂತು ನಿರ್ಲಿಪ್ತ ಸ್ಥಿತಿಯಲ್ಲಿರುವ ಅವರಿಗೆ ಈ ಬಗ್ಗೆ ಅಭಿಮಾನವೂ ಇಲ್ಲ ಎಂದು ಅಕ್ಕನವರು ಶರಣರ ಮಾಯಾತೀತವಾದ ಸತ್ಯ ಶುದ್ಧ ಚಾರಿತ್ರ್ಯವನ್ನು ಎತ್ತಿ ಹಿಡಿದಿದ್ದಾರೆ.

ಜೀವನದಲ್ಲಿ ಒಂದು ಸಾರಿ ಇಂಥ ಭಯಂಕರ ಭ್ರಮೆಯಾದ ಮಾಯೆಯ ಕೈಯಲ್ಲಿ ಸಿಕ್ಕಿಕೊಂಡಿದ್ದೇ ಆದರೆ ಅದರಿಂದ ಪಾರಾಗುವುದು ಅಸಾಧ್ಯ ಎಂದು ಶರಣ ಆದಯ್ಯನವರು ತಮ್ಮ ವಚನದಲ್ಲಿ ಎಚ್ಚರಿಕೆ ನೀಡುತ್ತಿದ್ದಾರೆ. ಅದು ಹೇಗೆ ಎಂದು ಈಗ ನೋಡೋಣ.

**ತನು ಮಾಯೆ, ತನುವಿಂಗೆ ಮನ**
**ಮಾಯೆ, ಮನಕ್ಕೆ ನೆನಹು ಮಾಯೆ,**
**ನೆನಹಿಂಗೆ ಅರಿವು ಮಾಯೆ,**
**ಅರಿವಿಂಗೆ ಕುರುಹು ಮಾಯೆ,**
**ಇದನರಿಯದೆ ಹರಿಹರಬ್ರಹ್ಮಾದಿಗಳೆಲ್ಲರೂ**
**ಮಾಯೆಯ ಕಾಲಸರಮಾಲೆಗಳಾದರು.**
**ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಮಾಯೆ,**
**ದೇವದಾನವಮಾನವರಿಗೆ ದಸರಿದೊಡಕಾಗಿ**
**ಕಾಡಿತ್ತು.**

ಪರಮಾತ್ಮನು ತನ್ನ ಲೀಲಾವಿನೋದವೆಂಬಂತೆ ಈ ಜಗತ್ತಿನಲ್ಲಿ ಮಾಯೆಯನ್ನು ಇಟ್ಟಿದ್ದಾನೆ. ಇದು ಹೇಗೆಂದರೆ ಹುಟ್ಟು–ಸಾವಿಗೆ ಒಳಗಾದ ಶರೀರವನ್ನು ಧರಿಸಿದ ಮಾನವ ನಾನು ಶಾಶ್ವತ ಅಲ್ಲ ಎಂದು ತಿಳಿದಿದ್ದರೂ ತನುಮೋಹಿಯಾಗಿ ಬದುಕಿರುವಾಗ ಏನೆಲ್ಲಾ ಹಗರಣ, ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ. ಇನ್ನು ಎಲ್ಲಾ ಸದರ್ಥ–ಅನರ್ಥಗಳಿಗೂ ಕಾರಣವಾದ ಮನಸ್ಸು ಸಹ ಮನುಷ್ಯನನ್ನು ಸುಲಭವಾಗಿ ದಾರಿ ತಪ್ಪಿಸುತ್ತದೆ. ಇದನ್ನು ಹಿಡಿದು ಸರಿದಾರಿಗೆ ತರಲು ಎಷ್ಟೆಲ್ಲಾ ತಪಸ್ಸು ಮಾಡಬೇಕು. ಅಂದಂತೆ ಕೈಗೆ ಸಿಗದ ಕಣ್ಣಿಗೆ ಕಾಣದ ಈ ಮನಸ್ಸೂ ಮಾಯೆ ಅಲ್ಲವೆ? ಇಂಥ ಮನಸ್ಸನ್ನು ಕಟ್ಟಿಹಾಕಲು ಇರುವ ಏಕೈಕ ಸಾಧನ ದೇವನ ಸ್ಮರಣೆ ಅಥವ ನೆನಹು. ಆದರೆ ಸರ್ವಶಕ್ತನೂ, ನಿರಾಕಾರ, ನಿರಂಜನನಾದ ದೇವನ ನೆನಪನ್ನು ಅಜ್ಞಾನಿಯಾದ ಮನಸ್ಸು ಸುಲಭವಾಗಿ ಸ್ಮರಿಸಿ ಆನಂದಿಸಬಲ್ಲುದೆ? ಏಕೆಂದರೆ ಲೌಕಿಕ ಜಂಜಾಟದಲ್ಲಿ ಸಿಕ್ಕಿರುವ ಮನಸ್ಸಿಗೆ ಇಲ್ಲಿ ನೆನಪು ಮಾಯೆಯಾಗಿ ಕಾಡುತ್ತಿದೆ. ನೆನಹು ಶೂನ್ಯವಾದ ಕಾರಣ ಮತಿಮನಗಳಿಗೆ ಅರಿವು ಸಾಧ್ಯವಾಗದು. ಅರಿವು ನಷ್ಟವಾದವನಿಗೆ ಭಕ್ತಿ, ಸುಜ್ಞಾನದಿಂದ ಕೂಡಿದ ದೇವನ ಕುರುಹು ಕೊಟ್ಟರೆ ಮಂಗನ ಕೈಯ ಮಾಣಿಕ್ಯದಂತೆ ವ್ಯರ್ಥವಾಗುವುದು. ಪರಮಾತ್ಮನ ಚಿರಂತನ ಸತ್ಯವನ್ನರಿಯದ ಪೌರಾಣಿಕ ಕಥೆಗಳಲ್ಲಿ ಅಸ್ತಿತ್ವ ಪಡೆದ ಹರಿಬ್ರಹಾದಿಗಳು ಮಾಯೆಗೆ ವಶವಾಗಿ ಯಮನ ಕೊರಳಿಗೆ ಮಾಲೆಯಾದರು ಅಂದರೆ ಸಂಪೂರ್ಣವಾಗಿ

ನಾಶವಾದರು. ಮಾಯೆಯ ಕೈಯಲ್ಲಿ ಸಿಕ್ಕಿಹಾಕಿಕೊಂಡವರ ಪಾಡು ದಸರಿದೊಡಕಿನಂತೆ ಇರುತ್ತದೆ ಎನ್ನುತ್ತಿದ್ದಾರೆ. ಅಂದರೆ ಅತ್ಯಂತ ನಯವಾಗಿರುವ ರೇಷ್ಮೆದಾರದ ಒಂದು ಎಳೆಯನ್ನು ಗಂಟು ಹಾಕಿದರೆ ಬಿಡಿಸುವುದು ಅಸಾಧ್ಯವಾದಂತೆ ಮಾಯೆಗೆ ವಶವಾದವರ ಸ್ಥಿತಿಯೂ ಇರುತ್ತದೆ ಎಂದು ಮಾಯಾಬಂಧನದ ಪರಿಯನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ.

ಮಾಯಾಕೋಲಾಹಲ ಎಂದೇ ಹೆಸರಾಗಿರುವ ಅಲ್ಲಮಪ್ರಭುದೇವರ ವಚನದೊಂದಿಗೆ ಮಾಯೆಯ ಉಪಟಳದಿಂದ ದೂರ ಸಾಗುವ ಸಂಕಲ್ಪ ಮಾಡೋಣ.

**ಹೆಣ್ಣು ಮಾಯೆ ಎಂಬರು; ಹೆಣ್ಣು ಮಾಯೆಯಲ್ಲ. ಹೊನ್ನು ಮಾಯೆ ಎಂಬರು; ಹೊನ್ನು ಮಾಯೆಯಲ್ಲ ಮಣ್ಣು ಮಾಯೆ ಎಂಬರು; ಮಣ್ಣು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ ಗುಹೇಶ್ವರ॥**







## ಆಚಾರ ಅರಿವು ಅನುಭಾವ

# ವಚನ ಸಾಹಿತ್ಯ



ಪೂಜ್ಯಶ್ರೀ ಬಸವಪ್ರಭು

12ನೇ ಶತಮಾನವನ್ನು ಒಂದು ವಜ್ರಯುಗವೆಂತಲೇ ಕರೆಯಬಹುದು. ಈ ಯುಗ ಸಾಮಾಜಿಕ ಧಾರ್ಮಿಕ ಆಧ್ಯಾತ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಭಕ್ತಿ ಹೀಗೆ ಎಲ್ಲರಂಗದಲ್ಲಿಯೂ ವೈಚಾರಿಕ ಸ್ವಾತಂತ್ರ್ಯವನ್ನು, ಗುರು ಬಸವಣ್ಣನವರ ನೇತೃತ್ವದಲ್ಲಿ ಕೊಟ್ಟ ಯುಗವೆಂತಲು ನಾವು ಅಂದುಕೊಳ್ಳಬಹುದು. ಈ ಎಲ್ಲಾ ಕಾರ್ಯಗಳನ್ನು ಮಾಡಲು ಬಳಸಿದ ಮಾನದಂಡವು ವಚನ ಸಾಹಿತ್ಯವಾಗಿದೆ. ಈ ವಚನಗಳ ರಚನೆಯು(ಸಾಹಿತ್ಯವು) ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಬಗೆಯ ಆಯಾಮವನ್ನು ತಂದು–ಕೊಟ್ಟ ವಿಶಿಷ್ಟಸಾಹಿತ್ಯ ರೂಪವಾಗಿದ್ದು ಮತ್ತು ವಚನ ಸಾಹಿತ್ಯದಿಂದ ಕನ್ನಡ ಸಾಹಿತ್ಯವು ಶ್ರೀಮಂತವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕನ್ನಡದ ನಾಡು, ನುಡಿ, ಭಾಷಾ ಸಂಸ್ಕೃತಿಗೆ ಜೀವಕಳೆ ಬಂದಂತಾಗಿದೆ.




ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಸ್ಪೃಶ್ಯ ಎಂಬ ಈ ಶ್ರೇಣಿಕೃತ ವ್ಯವಸ್ಥೆಯನ್ನು ಧಿಕ್ಕರಿಸಿ, ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯದೊಂದಿಗೆ ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಆರ್ಥಿಕ, ಸ್ತ್ರೀ ಸಮಾನತೆಯಂತಹ ಮಾನವೀಯ ಮೌಲ್ಯಗಳನ್ನು ಜಾರಿಗೆತಂದು ಜನ ಸಾಮಾನ್ಯರ ಬದುಕನ್ನು ತಿಳಿಗೊಳಿಸಿದ್ದಕ್ಕಾಗಿ, ಜನಪದರು ತಮ್ಮ ಸಾಹಿತ್ಯದಲ್ಲಿ ಗುರು ಬಸವಣ್ಣನವರನ್ನು ಹೃದಯಂಗಮವಾಗಿ ಸ್ತುತಿಸಿದ್ದಾರೆ.

ಎಲ್ಲ ಬಲ್ಲಿದನಯ್ಯಾ ಕಲ್ಯಾಣ
ಬಸವಯ್ಯಾ ಚೆಲ್ಲಿದನು ತಂದು ಶಿವ ಬೆಳಕ ।
ನಾಡೊಳಗೆ ಸೊಲ್ಲೆತ್ತಿ ಜನವು ಹಾಡುವುದು.

ದೇವನ ಮಹಾಮನೆಯಾದ ಈ ಮರ್ತ್ಯಲೋಕವನ್ನು ಅನಂತ ಮೂಢಾಚಾರದ ಕಶ್ಮಲಗಳಿಂದ

ಅಂದೆಗೆಡಿಸಿದ್ದನ್ನು ಕಂಡು ಗುರು ಬಸವಣ್ಣನವರು ಶಿವಾಚಾರದ ಬೆಳಕನ್ನು (ದೈವೀಭಕ್ತಿಯ ಸಮಾಜವಾದ ಸಿದ್ಧಾಂತವನ್ನು) ಚೆಲ್ಲಿದರು. ಅಂತೆಯೇ ಬಡವ-ಬಲ್ಲಿದ ಹೆಣ್ಣು-ಗಂಡು ಜಾತಿ-ವರ್ಣ-ವರ್ಗ ಎನ್ನದೆ, ಸರ್ವರೂ ತಮ್ಮ ಬಾಳಿನ ಹಣತೆಯನ್ನು ಹೊತ್ತಿಸಿಕೊಂಡು ಜೀವನ್ಮುಕ್ತಿ ಪಡೆದುಕೊಂಡರು. ಅನುಭವ ಮಂಟಪದಲ್ಲಿ ಶಿವಭಕ್ತಿ ಪಡೆದು-ಕೊಂಡ ಶರಣರು ಜೇನ್ನೊಣದಂತೆ, ವಚನ ಸಾಹಿತ್ಯ ಮಕರಂದವನ್ನು ಈ ಜಗತ್ತಿಗೆ ಕೊಟ್ಟು ಹೋಗಿದ್ದಾರೆ. ಗುರು ಬಸವಣ್ಣನವರಾದಿಯಾಗಿ ಶರಣರು ರಚಿಸಿದ ವಚನ ಸಾಹಿತ್ಯ ಬಸವಪೂರ್ವದ ಹಿಂದಿನ ಸಾಹಿತ್ಯಕ್ಕಿಂತ ಭಿನ್ನವಾದುದ್ದಾಗಿದೆ. ತನ್ನದೇ ಆದ ಸ್ವತಂತ್ರತೆಯ ಅರ್ಥ ಉಗಮ ಸ್ವರೂಪ ಮತ್ತು ಲಕ್ಷಣವನ್ನು ಒಳಗೊಂಡು ಈ ಜಗತ್ತಿಗೆ ವೈಶಿಷ್ಟ್ಯಪೂರ್ಣವಾದ ಅನುಭವ ಸಾಹಿತ್ಯವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ.

## ವಚನದ ಅರ್ಥ:

ವಚನ ಎಂದರೆ ಮೂಲತಃ ಸಂಸ್ಕೃತದಲ್ಲಿ ಮಾತು, ಎಂಬರ್ಥವನ್ನು ಕಲ್ಪಿಸುತ್ತದೆ. ಮತ್ತೊಂದು ಕಡೆ ಜೇಡರದಾಸಿಮಯ್ಯನವರು 'ಸೂಳ್ನುಡಿ' ಎಂದಿದ್ದಾರೆ. ಇನ್ನೂ ಅನೇಕ ಅರ್ಥದಲ್ಲಿ ನೋಡುವುದಾದರೆ, ಮಾತಾನಾಡುವುದು, ವಾಗ್ದಾನಮಾಡವುದು, ಭಾಷೆಕೊಡುವದು, ಪ್ರತಿಜ್ಞೆ ಮಾಡುವುದು ಎಂಬಿತ್ಯಾದಿ ಅರ್ಥವನ್ನು ಬಲ್ಲವರು ತಮ್ಮದೆ ಅಭಿಪ್ರಾಯದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಕೆಲವರು ಗದ್ಯವೆಂತಲು, ಪದ್ಯವೆಂತಲೂ ಅಥವಾ ಗದ್ಯ ಪದ್ಯದ ನಡುವೆ ಬರುವ ವಿಶಿಷ್ಟ ಮಾದರಿ ಎಂದು ಕರೆಯುವರು. ರಂ.ಶ್ರೀ ಮುಗಳಿಯವರು ವಚನವೆಂಬುದು ಭಾವಗೀತೆ ಲಕ್ಷಣದಿಂದ ಕೂಡಿದ ಅನುಭಾವ ಗದ್ಯ ಸ್ವರೂಪ ಎಂದಿದ್ದಾರೆ. ಶ್ರೀ ಚನ್ನವೀರ ಕಣವಿಯವರು ವಚನಗಳು ಗದ್ಯದ ಉಡಿಗೆಯನ್ನು ಪದ್ಯದ ನಡುಗೆಯನ್ನು ಮೇಳವಿಸಿಕೊಂಡು ಭಾವಲಹರಿಗೆ ತಕ್ಕಂತೆ ತೊನೆಯುತ್ತ ಸಾಗುವ ಆಕೃತಿ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅನೇಕ ವಿದ್ವಾಂಸರು ಗದ್ಯವೂ ಅಹುದು ಪದ್ಯವೂ ಅಹುದು ಅವುಗಳನ್ನು ಪದ್ಯದಂತೆ ನಿರರ್ಗಳವಾಗಿ ಹಾಡಬಹುದಾದರೂ ಶರಣರು ಹಾಡಲಿಕ್ಕಾಗಿ ರಚಿಸಿಲ್ಲ ಎನ್ನತ್ತಾರೆ. ಮಲ್ಲಿಕಾರ್ಜುನ ಮನಸೂರ, ಸಿದ್ರಾಮ ಜಂಬಲದಿನ್ನಿಯವರಂತಹ ಪ್ರಸಿದ್ಧಗಾಯಕರು, ವಚನಗಳು ಕಾವ್ಯ ಮತ್ತು ಭಾವಗೀತೆಯಿಂದ ಕೂಡಿದವು ಎಂದೂ, ಲಯಬದ್ಧವಾಗಿ ಹಾಡಬಹುದೆಂದೂ ಹೇಳಿದ್ದಲ್ಲದೇ, ಸ್ವತಃ ತಮ್ಮ ಸುಶ್ರಾವ್ಯ ಕಂಠದಿಂದ ಹಾಡಿ ತೋರಿಸಿದ್ದಾರೆ. ಹೀಗೆ ಎಲ್ಲರ ಅಭಿಪ್ರಾಯ ಹೆಚ್ಚು ಕಡಿಮೆ ಒಂದೇ ಆಗಿದ್ದರೂ ಗುರು ಬಸವಾದಿ ಪ್ರಮಥರು ವಚನಗಳನ್ನು ಮೂರು ರೀತಿಯಲ್ಲಿ ಪ್ರಯೋಗ ಮಾಡಿರುವುದಂತೂ ಸತ್ಯ.

**1) ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಮುಂದಿಟ್ಟುಕೊಂಡು ಸಮಗ್ರ ಬದಲಾವಣೆ ತರಲು ಪ್ರತಿಭಟಿಸಿದವು.**

**2)ಅವರ ಸಾಧನೆಯ ಫಲಶೃತಿಯಿಂದ ಹೊರಹೊಮ್ಮಿದ ಅನುಭಾವದ ಸಂಗೀತ ತರಂಗಗಳು.**

**3) ಆಧ್ಯಾತಿಕ ಮತ್ತು ತಾತ್ವಿಕ ಸಿದ್ಧಾಂತಗಳ ಪ್ರತಿಪಾದನೆ ಹಾಗೂ ಲಿಂಗಾಂಗ ಯೋಗ ಮಾರ್ಗದ ಪರಿಕಲ್ಪನೆಯ ಸಾಧನಗಳು.**

ಇನ್ನು ಶರಣರ ದೃಷ್ಟಿಯಲ್ಲಿ ವಚನಗಳ ಅರ್ಥವನ್ನು ನೋಡುವುದಾದರೆ: 'ವಚನ' ಮಂತ್ರವೆಂತಲೂ, ಆತ್ಮಸಾಕ್ಷಿಯ ನುಡಿಗಳೆಂತಲೂ, ಅವು ಅನುಭಾವದ ಪ್ರತೀಕವೆಂತಲೂ ಉಲ್ಲೇಖಿಸಿದ್ದಾರೆ. ಆ ಮಾತುಗಳನ್ನಿಲ್ಲಿ ಗಮನಿಸಬಹುದು.

**ಮಾಂತೆಂಬುದು ಜೋತಿರ್ಲಿಂಗ
ಸ್ವರವೆಂಬುದು ಪರತತ್ವ ತಾಳೋಷ್ಟ್ರ
ಸಂಪುಟವೆಂಬುದು ನಾದ ಬಿಂದು ಕಳಾತೀತ
ಗುಹೇಶ್ವರನ ಶರಣ ನುಡಿದು ಸೂತಕಿಗಳಲ್ಲ
ಕೇಳಾ ಮರುಳೆ. (ಸವಸ)**







ಇಲ್ಲಿ ಅಲ್ಲಮಪ್ರಭುದೇವರು ತಮ್ಮ ವಚನದಲ್ಲಿ ಮಾತಿನ ಬಗ್ಗೆ ಹೇಳುತ್ತಾ, ಪ್ರತಿಯೊಬ್ಬನ ವ್ಯಕ್ತಿತ್ತ ವ್ಯಕ್ತವಾಗುವುದು, ಅವನಾಡುವ ಮಾತಿನಿಂದ. ಅಂತಹ ಮಾತಿನಲ್ಲಿ ಶಿಸ್ತು-ಬದ್ಧತೆಯಿರಬೆಕು ಮತ್ತು ಅನುಭಾವದಿಂದ ಹೊರಹೊಮ್ಮುವಂತಿರಬೆಕು. ಆ ಮಾತುಗಳೇ ದೈವೀಸ್ವರೂಪದ(ಜ್ಯೋತರ್ಲಿಂಗ) ವಾಣಿಗಳಾಗಿರುತ್ತವೆ ಮತ್ತು ಪರತತ್ವ ನುಡಿಗಳಿಂದ ಕೂಡಿರುವಂತಹವುಗಳಾಗಿರುತ್ತವೆ ಎಂಬುದನ್ನು ಸ್ಪಷ್ಟೀಕರಿಸಿದ್ದಾರೆ. ಇನ್ನೂ ಗುರು ಬಸವಣ್ಣನವರು ವಿಚಾರದಲ್ಲಿ ನೋಡುವುದಾದರೆ,

**ಆದ್ಯರ ವಚನ ಪರುಷ ಕಂಡಣ್ಣಾ!
ಸದಾಶಿವನೆಂಬ ಲಿಂಗವ ನಂಬುವುದು
ನಂಬಲೊಡನೆ ನೀ ವಿಜಯೀ ಕಂಡಣ್ಣಾ!
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಲಿಂಗದೇವನ ಶರಣರ ವಚನ ಬೇವ
ಸವಿದಂತೆ.** (ಬ.ವ 173)

ಈ ವಚನದಲ್ಲಿ ಗುರು ಬಸವಣ್ಣನವರು 'ವಚನಕ್ಕೆ' ಪರುಷ ಎಂದಿದ್ದಾರೆ. ಒಂದು ಪರುಷಮಣಿಯನ್ನು ಸ್ಪರ್ಶಮಾಡಿದ ಯಾವುದೇ ಕಬ್ಬಿಣವು ಅದು ತನ್ನ ಮೂಲ ಗುಣವನ್ನು ಕಳೆದುಕೊಂಡು, ಚಿನ್ನವಾಗಿ ಪರಿವರ್ತನೆ ಹೊಂದುತ್ತದೆ. ಅದೇ ರೀತಿಯಾಗಿ ಒಬ್ಬ ವ್ಯಕ್ತಿಯು ಆಡಿದ ಮಾತುಗಳು ದೈವೀ ಅನುಭವಕ್ಕೊಳಗಾಗಿ ವಚನರೂಪವನ್ನು ಪಡೆದು, ಮಂತ್ರವಾಗಬೇಕೆನ್ನುತ್ತಾರೆ. ಇಂತಹ ಮಂತ್ರದಂತಿರುವ ವಚನಗಳನ್ನು ಜೀವನದಲ್ಲಿ ಅನುಷ್ಠಾನ ಮಾಡಿದರೆ, ವ್ಯಕ್ತಿತ್ವ ವಿಕಾಸವಾಗಬಹುದೆಂಬ ನಿಲುವು ಅವರದ್ದಾಗಿದೆ.

**ನುಡಿದರೆ ಮುತ್ತಿನ ಹಾರದಂತಿರಬೇಕು;
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು;
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು;
ನುಡಿದರೆ ಲಿಂಗ ಮೆಚ್ಚಿ
ಅಹುದಹುದೆನಬೇಕು;
ನುಡಿಯೊಳಗಾಗಿ ನಡೆಯದಿದ್ದರೆ
ಲಿಂಗದೇವನೆಂತೊಲಿವನಯ್ಯಾ?**
(ಬ.ವ 796)

ಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧ ಮತ್ತು ಜನಪ್ರಿಯ ವಚನಗಳಲ್ಲಿ ಇದು ಒಂದು. ಮಾತನಾಡುವುದು ಒಂದು ದೈವೀಕಲೆ. 'ಮಾತು ಬಲ್ಲವನು(ಮಾಣಿಕ್ಯ) ಪ್ರೀತಿ ತಂದ, ಮಾತನರಿಯದವನು ಜಗಳ ತಂದ', 'ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು' ಎಂಬೆಲ್ಲಾ ಗಾದೆಗಳು ಮಾತಿನ ಸಲುವಾಗಿಯೇ ಹುಟ್ಟಿಕೊಂಡಿವೆ ಮಾತಾನಾಡಿದರೆ ಶಬ್ದಗಳು ಕೂಡಿಸಿಕೊಂಡು ಹೋಗುತ್ತವೆ. ಕೇಳುಗರಿಗೆ ಅರ್ಥವೇ ಆಗದು. ಆದ್ದ-ರಿಂದ ಮಾತನಾಡುವಾಗ ವಿಷಯದಲ್ಲಿ ಸುಸಂಬದ್ಧತೆ(consistency), ಸ್ಪಷ್ಟತೆ(clarity)ಇರಬೇಕು. ಹೀಗೆ ನಡೆ-ನುಡಿ ಒಂದಾಗಿದ್ದರೆ ಲಿಂಗದೇವನ ಒಲುಮೆ ಗಳಿಸಿಕೊಳ್ಳಲು ಸಾಧ್ಯವಾಗುವುದೆಂಬುದನ್ನು ಅನೇಕ ಉದಾಹರಣೆಗಳೊಂದಿಗೆ ಗುರು ಬಸವಣ್ಣನವರಾದಿಯಾಗಿ ಅನೇಕ ಶರಣರು ತಮ್ಮ ವಚನಗಳಲ್ಲಿ ಮಾತನಾಡುವ ಕಲೆಯನ್ನು ತೋರಿಸಿಕೊಟ್ಟಿದ್ದಾರೆ.

## ವಚನ ಸಾಹಿತ್ಯದ ಉಗಮ:

ಈ ಜಗತ್ತಿನಲ್ಲಿ ಯಾವುದೇ ಒಂದು ಕ್ರಾಂತಿ ಅಥವಾ ಚಳುವಳಿ ಒಮ್ಮೆಲೆ ಉದ್ಭವವಾಗಿರವುದಿಲ್ಲ, ಯಾವುದೇ ಕ್ರಾಂತಿಯ ಹಿಂದೆ ಅನೇಕ ಸುಪ್ತಶಕ್ತಿಗಳ ಕ್ರಿಯಾಚರಣೆ ನಡೆದೇ ಇರುತ್ತದೆ. ಅಲ್ಲಿನ ಸ್ಥಿತಿಗತಿಗನುಗುಣವಾಗಿ ನಡೆದ ಅನ್ಯಾಯ, ಅತ್ಯಾಚಾರ, ದೌರ್ಜನ್ಯಗಳಿಂದ ರೋಸಿಹೋಗಿ ಕಾಲಾನಂತರದಲ್ಲಿ ಒಬ್ಬ ಸಂಘಟನಕಾರನಿಂದ ಪ್ರತಿಭಟನೆ ಮುಖಾಂತರ ಹೊಸದೊಂದು ಬಗೆಯ ಚಳುವಳಿ ನಡೆದು, ಅದು ಮುಂದೆ ಕ್ರಾಂತಿ ಎನಿಸಿಕೊಳ್ಳುತ್ತದೆ. ಅದು ಖಡ್ಗವಿಡಿದು

ಹಿಂಸಾರೂಪ ಪಡೆಯುವ ರಕ್ತ ಕ್ರಾಂತಿಯಾಗಿರಬಹುದು, ಇಲ್ಲವೆ ಸುಪ್ತವಾಗಿದ್ದ ಅಂತಃಶಕ್ತಿಯನ್ನು, ಅಂತಃಪ್ರಜ್ಞೆಯನ್ನು ಉದ್ಧೀಪಿಸುವ ಅನಂತ ರಕ್ತಿ-ಉಕ್ತಿಗಳ ಅಭಿವ್ಯಕ್ತಿ ರೂಪವಾಗಿರಬಹುದು, ಕ್ರಿಯಾಜ್ಞಾನಾನುಭವ ಸಮನ್ವಿತ ಅಹಿಂಸಾತ್ಮಕ ವೈಚಾರಿಕವಾದ ಕ್ರಾಂತಿಯಾಗಬಹುದು. ಆದರೆ ಇಲ್ಲಿ ಶರಣರು ಎಸಗಿದ ಅಹಿಂಸಾತ್ಮಕ ವೈಚಾರಿಕ ಕ್ರಾಂತಿ; ಅದನ್ನವರು ತಮ್ಮ ಸತ್ಯಶುದ್ಧ ನಡೆನುಡಿ ಮೂಲಕ ನೆರವೇರಿಸಿದರು. ಹೀಗೆ ಹುಟ್ಟಿದಂತಹ ಬೆಳೆಸೆಂದರೆ, ವಚನ ಸಾಹಿತ್ಯ.

**ಹಾಲ ತೊರೆಗೆ ಬೆಲ್ಲದ ಕೆಸರು ಸಕ್ಕರೆಯ**
**ಮಳಲು ತವರಾಜದ ನೊರೆತೊರೆಯಂತೆ**
**ಆದ್ಯರ ವಚನವಿರಲು ಬೇರೆ ಬಾವಿಯ**
**ತೋಡಿ ಉಪ್ಪನೀರನುಂಬುವವನ**
**ವಿಧಿಯಂತೆ ಆಯಿತ್ತೆನ್ನ ಮತಿ ಲಿಂಗದೇವಾ.**

(ಬ.ವ294)

ಇಲ್ಲಿ ಗುರು ಬಸವಣ್ಣನವರು ವಚನ ವಾಙ್ಮಯದ ಮಹತ್ವವನ್ನು ಬಿತ್ತರಿಸುತ್ತಾ ಆದ್ಯರ ವಚನವೆಂಬ ಉಕ್ತಿಯನ್ನು ಪ್ರಸ್ತಾಪ ಮಾಡುತ್ತಾ ಮೂರು ರೀತಿಯಲ್ಲಿ ವಿಂಗಡಿಸುತ್ತಾರೆ. ಆದ್ಯರು, ವೇದ್ಯರು, ಸಾಧ್ಯರು ಎಂದು. ಈ ರೀತಿಯಾಗಿ ಹೇಳಿದಾಕ್ಷಣ ಕೆಲವು ಸಾಹಿತಿಗಳು, ವಚನಗಳ ಪ್ರಾಚೀನತೆ ಕಡೆಗೆ ಮುಖಮಾಡಿ ಗುರುಬಸವಣ್ಣನವರಗಿಂತಲೂ ಹಿಂದೆ ವಚನಗಳಿದ್ದಿರಬೇಕೆಂದು ಸಂಶೋಧನೆಗೆ ಮುಂದಾಗುವರು. ಆದರೆ ಬಸವಪೂರ್ವದಲ್ಲಿ ಶ್ರೇಣಿಕೃತ ವ್ಯವಸ್ಥೆಯಲ್ಲಿ ಇದ್ದಿದು ಕೇವಲ ಸಂಸ್ಕೃತದಿಂದ ಬರೆಯಲ್ಪಟ್ಟ ಉಪನಿಷತ್‌ಗಳು, ಹಳೆಗನ್ನಡದಿಂದ ಬರೆಯಲ್ಪಟ್ಟ ರಾಜ ಮಹಾರಾಜರ ಚರಿತ್ರೆಗಳು, ಕವಿಪುಂಗವರ ಪರಾಣಗಳು, ಜೈನ ಸಾಹಿತ್ಯ ಹುಲುಸಾಗಿದ್ದವು. ಅವು ಜನ ಸಾಮಾನ್ಯರಿಗೆ ತಿಳಿಯದಂತಾಗಿ ಪಾಂಡಿತ್ಯರ ಸೊತ್ತಾಗಿದ್ದವು ಎಂಬುವುದನ್ನು ಮರೆಯುವಂತಿಲ್ಲ. ಅದನ್ನು **ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರು** ಬರೆದ **'ರಿಲಿಜೀಯನ್ & ಸೊಸಾಯಿಟಿ'** ಎಂಬ ಉದ್ಗ್ರಂಥದಲ್ಲಿ ಈ ರೀತಿ ಕಾಣಬಹುದು. "ಉಪನಿಷತ್‌ಗಳು ಜೀವ-ಜಗತ್ತು-ಈಶ್ವರರ ಬಗ್ಗೆ ಸಾಕಷ್ಟು ತತ್ವ ವಿಚಾರಗಳನ್ನು ಒಳಗೊಂಡಿವೆ, ಆದರೆ ಎಷ್ಟೋ ಜನ ಸಾಮಾನ್ಯರಿಗೆ ಎಟುಕುತ್ತಿರಲಿಲ್ಲ. ಮಹಾಭಾರತ, ಉಪನಿಷತ್, ಬ್ರಹ್ಮಸೂತ್ರ ಇವೆಲ್ಲವು ಅನುಭಾವ ಪ್ರಧಾನವಾಗಿರದೆ, ಬುದ್ಧಿ ಪ್ರಧಾನವಾಗಿದ್ದವು. ಈ ಭಾಷಾ ಪಾಂಡಿತ್ಯವು ಪಂಡಿತರ ಸೊತ್ತಾದವೆ ವಿನಃ ಜನರ ಸೊತ್ತಾಗಲಿಲ್ಲ. ಹಾಗಾಗಿಯೇ ಬಸವಣ್ಣನವರು ಇವೆಲ್ಲವುಗಳನ್ನು ಆಧ್ಯಯನ ಮಾಡಿ ಜೀವ-ಜಗತ್ತು-ಈಶ್ವರ ತತ್ವಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಹೇಳಿದರು. ಅವರು ಅನುಭಾವದಿಂದ ಬರೆದ ಮಾತುಗಳೇ ವಚನಗಳಾದವು, ಸಂಘಟನೆಗೆ ಮುಖ್ಯ ಸೂತ್ರಗಳಾದವು. ಎಂಬುದನ್ನು ನಾವು ಇಲ್ಲಿ ನೋಡುತ್ತೇವೆ. ಮೂಲ ವಚನಗಳ ಉದ್ದೇಶ ಯಾವುದೇ ಜಾತಿ, ಮತ, ಪಂಥ, ಪಂಗಡಗಳ ಭೇದವಿಲ್ಲದೆ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು, ಎನ್ನುವ ಸಮಾನತೆಯನ್ನು ಕೊಡುವುದಾಗಿತ್ತು.

***** ಓದುಗರಿಗೆ ವಿಶೇಷ ಸೂಚನೆ *****

**ಶರಣ ಬಂಧುಗಳೆ ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿದ್ದಲ್ಲಿ ವಿಶೇಷ ಲೇಖನಗಳನ್ನು basavakumaraswamiji@gmail.com ಮೇಲ್ ಅಡ್ರೆಸ್‌ಗೆ ಲೇಖನಗಳನ್ನು ಕಳಿಸಬಹುದು. ನಿಮ್ಮ ಕುಟುಂಬದಿಂದಲೂ ಶರಣರ ಹಬ್ಬಗಳಿಗೆ ಶುಭಾಶಯ ಕೋರಬಹುದು. ಕುಟುಂಬದ ಅಥವಾ ಒಬ್ಬರ ಫೋಟೋ ಕಳುಹಿಸದರೆ ನಿಮ್ಮ ಫೋಟೊ ವನ್ನು ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ**
**ಶ್ರೀ ಬಸವಕುಮಾರ ಸ್ವಾಮೀಜಿ**
**ಮೊ.9449588669.**





ಅಂತೆಯೇ ಬಸವಣ್ಣನವರು ಲಿಂಗಾಯತ ಧರ್ಮವನ್ನು ಸ್ಥಾಪಿಸಿ ಯಶಸ್ವಿಯಾದರು. ಅಂದಾಗ ಹನ್ನೆರಡನೆಯ ಶತಮಾನದ ಗುರು ಬಸವಾದಿ ಶರಣ ಶರಣೆಯರೇ ವಚನಗಳ ಹುಟ್ಟಿಗೆ ಕಾರಣಿಕರ್ತರು ಮತ್ತು ಆದ್ಯರು, ವೇದ್ಯರು, ಸಾಧ್ಯರಾಗಿದ್ದಾರೆ ಎಂಬ ಮಾತು ಅಕ್ಷರಶ: ಸತ್ಯವಾದುದ್ದಾಗಿದೆಯಲ್ಲವೆ?. "ಬಸವ ಸಾರಿದನಂದು ಕುಶಲದಲ್ಲಿ ವಚನಗಳ .." ಅಂದಾಗ ವಚನಗಳ ಉಗಮಕ್ಕೆ ಗುರು ಬಸವಣ್ಣನವರೇ ಆದ್ಯರಾಗುತ್ತಾರೆ. ಈ ಮೇಲಿನ ಎಲ್ಲಾ ಮಹನೀಯರ ವಿಚಾರವನ್ನು ತಿಳಿದುಕೊಂಡಾಗ ನಾವು ಇಲ್ಲಿ ಮೂರು ರೀತಿಯಾಗಿ ವಿಂಗಡಣೆ ಮಾಡಬಹುದು. ಆದ್ಯರೆಂದರೆ: ಗುರು ಬಸವಣ್ಣನವರಾದಿಯಾಗಿ, ಜೇಡರ ದಾಸಿಮಯ್ಯ, ಮಾದರಚೆನ್ನಯ್ಯ, ಅಲ್ಲಮಪ್ರಭುದೇವರು, ಸಕಲೇಶ ಮಾದರಸ, ಡೋಹರ ಕಕ್ಕಯ್ಯ, ವೀರಮಾತೆ ಅಕ್ಕನಾಗಲಾಂಬಿಕೆ ಇನ್ನಿತರ ಸಮಕಾಲೀನರು. ಹಿರಿಯ ಸಮಕಾಲಿನರಾದ ವೇದ್ಯರೆಂದರೆ: ಚಿನ್ಮಯ ಜ್ಞಾನಿ ಚೆನ್ನಬಸವಣ್ಣನವರು, ಜಗನ್ಮಾತೆ ಅಕ್ಕಮಹಾದೇವಿಯವರು, ಲಿಂಗಾಂಗಯೋಗಿ ಸಿದ್ಧರಾಮೇಶ್ವರರು. ಸಾಧ್ಯರೆಂದರೆ: ಅನುಭವ ಮಂಟಪದಲ್ಲಿ ದೀಕ್ಷೆ ತೆಗೆದುಕೊಂಡು ಪರಿವರ್ತನೆಯಾಗಿ ವಚನಗಳನ್ನು ಬರೆಯಲು ತಮ್ಮ ಕಾಯಕದಿಂದ ಪ್ರೇರಣೆ ಪಡೆದುಕೊಂಡವರಾದ ಶರಣ-ಶರಣೆಯರು ಆಯ್ದಕ್ಕಿ ಲಕ್ಕಮ್ಮ-ಮಾರಯ್ಯ, ಮೋಳಿಗೆ ಮಹಾದೇವಿ-ಮಾರಯ್ಯ, ಹಡಪದ ಲಿಂಗಮ್ಮ-ಅಪ್ಪಣ್ಣ, ಕಾಳವ್ವೆ, ಸತ್ಯಕ್ಕ, ಸೂಳೆ ಸಂಕವ್ವೆ ಮೊದಲಾದವರು.

**ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೆ**
**ಜಲವೊಂದೆ ಶೌಚಾಚಮನಕ್ಕೆ**
**ಕುಲವೊಂದೆ ತನ್ನ ತಾನರಿದವಂಗೆ**
**ಫಲವೊಂದೆ ಷಡುದರುಶನ ಮುಕ್ತಿಗೆ**
**ನಿಲುವೊಂದೆ ಲಿಂಗದೇವ ನಿಮ್ಮನರಿದವಂಗೆ.**

(ಬವ872)

ದೇವರು ಬದುಕನ್ನು ಕೊಟ್ಟರೆ, ಗುರುಬಸವಣ್ಣನವರು ವಚನ ಸಾಹಿತ್ಯದ ಮೂಲಕ ಬದುಕಲು ಕಲಿಸಿಕೊಟ್ಟರು. ಕಾರಣ ಅಂದಿನ ಆ ಕಾಲದಲ್ಲಿ ನೆಲ ನೆಲದಲ್ಲಿ ಭೇದ, ಜಲಜಲದಲ್ಲಿ ಭೇದ, ಮಾನವ ಮಾನವರಲ್ಲಿ ಮತ್ತು ಅವನ ಶರೀರದ ಅಂಗಗಳಲ್ಲಿಯು ಭೇದಗಳನ್ನು ಕಲ್ಪಿಸಿರುವಂತಹ ಪುರೋಹಿತಶಾಹಿಗಳ ಸಂಪ್ರದಾಯಕ್ಕೆ ಪ್ರತ್ಯುತ್ತರವಾಗಿ ನೆಲ, ಗಾಳಿ, ಬೆಳಕು, ಆಕಾಶ, ಭೂಮಿಯಲ್ಲಿ ಹುಟ್ಟಿಸಿರುವ ಭೇದಗಳನ್ನು ಹೊಡೆದೋಡಿಸಿ, ನಿಜ ಪರಮಾತ್ಮನನ್ನು ಅರಿಯಲಿಕ್ಕೆ ಅವಕಾಶ ಮಾಡಿಕೊಟ್ಟರು. ಅಂತೆಯೇ ಬಡವ ಬಲ್ಲಿದ, ಮೇಲುಕೀಳಿಲ್ಲದೆ ಅನಭವ ಮಂಟಪದಲ್ಲಿ ಶರಣರೆಲ್ಲಾ ಕೂಡಿ ಬಾಳಿದರು. ಇಂತಹ ಸಮಾನತೆಯನ್ನು ಬೋಧಿಸುವ ವಚನಗಳನ್ನು ನೋಡಿದಾಗ ವಚನಗಳ ಹುಟ್ಟಿಗೆ ಎರಡು ಕಾರಣಗಳನ್ನು ಹುಡುಕಿರವುದನ್ನು ಗಮನಿಸಬಹುದು.

**1) ಶಿವಾಗಮಾದಿ ಗ್ರಂಥಗಳಲ್ಲಿ ಉಕ್ತವಾದ ಉದಾತ್ತ ವಿಚಾರದ ಆಧ್ಯಯನ.**

**2) ಸಮಾಜದಲ್ಲಿ ಗ್ರಂಥಸ್ಥ ವಿಚಾರಗಳಿಗೆ ಭಿನ್ನವಾದ ನಡುವಳಿಕೆಗಳು ಇದರಿಂದ ಚಿಂತನಶೀಲ ಹೃದಯದಲ್ಲಿ ವಚನಗಳು ಹೊರಹೊಮ್ಮಿರುವುದು.**

ಒಂದಂತೂ ಸತ್ಯ. ಗುರು ಬಸವಾದಿ ಪ್ರಮಥರಿಂದ ರಚನೆಗೊಂಡ ವಚನ ಸಾಹಿತ್ಯ ಇತಿಹಾಸದಲ್ಲಿ ಹೊಸ ಯುಗವನ್ನೇ ಆರಂಬಿಸಿ, ಕನ್ನಡ ಸಾಹಿತ್ಯ ಲೋಕ-ಕ್ಕೆ ಮುನ್ನುಡಿ ಬರೆದು ಅದರ ಆತ್ಮವಾಗಿ ಕಂಗೊಳಿಸುತ್ತಲಿದೆ. ವಚನಗಳು ಹಿಂದಿನ ಕಥೆಯನ್ನು ಹೇಳದೆ, ಅವಿಶ್ರಾಂತವಾಗಿ ಮುಂದಿನ ಭವಿಷ್ಯವನ್ನು ರೂಪಿಸುವ ಸಂದೇಶಗಳಾಗಿವೆ. ಇಂತಹ ವಚನಗಳನ್ನು ಜಗತ್ತಿನ ಎಲ್ಲಾ ಭಾಷೆಗಳಲ್ಲಿ ಪ್ರಚಾರ ಮಾಡುವ ಗುರುತರ ಜವಾಬ್ದಾರಿ ನಮ್ಮ ಮೇಲಿದ್ದು, ವಚನಗಳನ್ನು ಹೆಚ್ಚು ಹೆಚ್ಚು ಅಧ್ಯಯನ ಮಾಡಿ ಅದರ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಈ ಕನ್ನಡ ನಾಡು ನುಡಿಗೆ ಗೌರವವನ್ನು ಸಲ್ಲಿಸೋಣ.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

## ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ ಬಸವ ಗಂಗೋತ್ರಿಯಲ್ಲಿ

### ದೇವ(ಭಾನು)ವಾರ 26 ಜೂನ್ 2016ರಂದು

# 7ನೇ ಬಸವೋತ್ಸವ

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬೆಂಗಳೂರಿನ ಕುಂಬಳಗೋಡು ಗ್ರಾಮ ವ್ಯಾಪ್ತಿಯ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ವಿಶಾಲವಾದ ಜಮೀನನ್ನು ಖರೀದಿಸಿತು. ಇದು ಬಸವ ಗಂಗೋತ್ರಿ ಆಶ್ರಮ ಎಂಬ ಹೆಸರು ಹೊಂದಿದೆ. ಇಲ್ಲಿ ಬಸವ ತತ್ವ ತರಬೇತಿ ಶಿಬಿರಗಳನ್ನು ಆಗಾಗ ನಡೆಸಲಾಗುತ್ತಿದೆ. ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳನ್ನು ಸಂಸ್ಥೆಯು ನಡೆಸುತ್ತಅದೆ. ಬಸವಾಲಯ ನಿರ್ಮಿಸಿದ್ದು ಇದರೊಳಗೆ ಗುರು ಬಸವಣ್ಣನವರ ಪಂಚಲೋಹದ ಪುತ್ಥಳಿಯನ್ನು ಸ್ಥಾಪಿಸಲಾಗಿದೆ. ಈ ಮೂರ್ತಿಯ ದಾನಿಗಳು ಅ. ಶರಣ. ಜಿ.ಎನ್.ಮುನಿಯಪ್ಪ ಅವರ ಸಹೋದರರು ಹಾಗೂ ಮಕ್ಕಳು. ಇಲ್ಲಿ ನಿತ್ಯವೂ ಪೂಜೆ ಪ್ರಾರ್ಥನೆಗಳು ಕ್ರಮಬದ್ಧವಾಗಿ ನಡೆಯುತ್ತಿವೆ. ಗಂಗೋತ್ರಿಯ ಆವರಣದಲ್ಲಿರುವ ಪ್ರಾರ್ಥನಾ ಮಂದಿರ ಬಸವ ಮಂಟಪದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತವೆ.

2010ರಿಂದ ವಾರ್ಷಿಕ ಉತ್ಸವವನ್ನಾಗಿ "ಬಸವೋತ್ಸವ" ವನ್ನು ನಡೆಸುವ ಸಂಕಲ್ಪ ತಳೆಯಲಾಗಿದೆ. ಅದರಂತೆ 26-6-2016ರಂದು " 7ನೇ ಬಸವೋತ್ಸವ" ಏರ್ಪಡಿಸಲಾಗಿದ್ದು ಬೆಳಗ್ಗೆ 10-30ಕ್ಕೆ ಉದ್ಘಾಟನೆ.

2010 ರಂದು ಜಗದ್ಗುರು ಶ್ರೀ ಚೆನ್ನಬಸವೇಶ್ವರ ಜ್ಞಾನ ಪೀಠವು ಸ್ಥಾಪನೆಗೊಂಡಿದ್ದು ಪೂಜಾ ನಿಷ್ಠರು, ಬಹುಬಾಷಾ ಪರಿಣಿತರು, ಜ್ಞಾನಿಗಳು, ತ್ಯಾಗಿಗಳು, ಉತ್ತಮ ಸಂಘಟಕರೂ ಆಗಿರುವ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾರೋಹಣ ಮಾಡಲಿದ್ದಾರೆ. ಪೀಠಾರೋಹಣದ ವಾರ್ಷಿಕೋತ್ಸವದ ಸಮಾರಂಭ ಜರುಗಲಿದೆ. ಪೂಜ್ಯರಿಗೆ ಅಭಿನಂದನೆ ನಂತರ ಸಮಾರೋಪ.

ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ. ಒಬ್ಬೊಬ್ಬರು ಒಂದು ಹೊತ್ತಿನ ಪ್ರಸಾದ ವ್ಯವಸ್ಥೆ ವಹಿಸಿಕೊಳ್ಳಬಹುದು. ಆಸಕ್ತರು ದೂರವಾಣಿ ಮೂಲಕ ವಿವರ ಪಡೆಯಬಹುದು.

| | | | |
|---|---|---|---|
| ಮಹಾಪೋಷಕರು | 10000 ರೂ | ಹಿತೈಷಿಗಳು | 1000ರೂ |
| ಪೋಷಕರು | 5000 ರೂ | ವಿಶೇಷ ಸದಸ್ಯರು | 500ರೂ |
| ದಾನಿಗಳು | 3000 ರೂ | ಸಾಮಾನ್ಯ ಸದಸ್ಯರು | 250ರೂ |

ಎಲ್ಲರೂ ತನು ಮನ ಧನಗಳಿಂದ ಸಹಕರಿಸಬೇಕೆಂದು ಸ್ವತಃ ಉದಾರವಾಗಿ ದೇಣಿಗೆ ನೀಡುವುದಲ್ಲದೆ ರಸೀತಿ ಪುಸ್ತಕ ಪಡೆದುಕೊಂಡು ದೇಣಿಗೆ ಸಂಗ್ರಹಿಸಿಕೊಡಬೇಕೆಂದು ಕೋರುತ್ತೇವೆ. ದವಸ-ಧಾನ್ಯ, ಅಕ್ಕಿ-ಬೇಳೆ, ಬೆಲ್ಲ-ಸಕ್ಕರೆ, ತರಕಾರಿ ಸಹ ನೀಡಬಹುದು.

ಬಸವ ಗಂಗೋತ್ರಿಗೆ ಸಿಟಿ ಮಾರುಕಟ್ಟೆಯಿಂದ 223, 224, 226 ನಂಬರ್ ಬಸ್ಸುಗಳು ಸಂಚರಿಸುತ್ತವೆ. ಮೆಜೆಸ್ಟಿಕ್‌ನಿಂದ ರಾಮನಗರ, ಬಿಡದಿ ಕಡೆಗೆ ಹೋಗುವ ಬಸ್ಸುಗಳು ಬೇಡಿಕ ಮೇರೆಗೆ ನಿಲ್ಲುತ್ತವೆ. ಗಂಗೋತ್ರಿ ಪ್ರವೇಶದ್ವಾರ ರಾಮೋಹಳ್ಳಿ ಕ್ರಾಸ್-ಕುಂಬಳಗೋಡು ಮಧ್ಯದಲ್ಲಿದೆ.

### ಸಂಪರ್ಕಿಸುವ ವಿಳಾಸಗಳು :


**ಪೂಜ್ಯಶ್ರೀ ಮಾತೆ ಕಸ್ತೂರಿದೇವಿ**
ಬಸವ ಗಂಗೋತ್ರಿ
ಬೆಂಗಳೂರು ದಕ್ಷಿಣ ತಾಲ್ಲೂಕು
9448386717

**ಪೂಜ್ಯಶ್ರೀ ಜಗದ್ಗುರು ಡಾ. ಮಾತೆ ಮಹಾದೇವಿ**
ಕಾರ್ಯಾಧ್ಯಕ್ಷೆ, ವಿಶ್ವಕಲ್ಯಾಣ ಮಿಷನ್ ರಾಜಾಜಿನಗರ
ಬೆಂಗಳೂರು 560010
9663385657, 9449588669









## ಪುಟಾಣಿಗಳ ಪ್ರಪಂಚ

| ಪುನೀತ್ ಎಂ.ಜಿ.

# ಗೆಲುವು ಗೆಲುವನ್ನೇ ಹುಟ್ಟಿಸುತ್ತದೆ

ಒಂದೂರಿನಲ್ಲಿ ಒಬ್ಬ ರೈತನಿದ್ದನು. ಅವನು ತನ್ನ ಹೊಲದಲ್ಲಿ ಅತ್ಯುತ್ತಮ ದರ್ಜೆಯ ಕಾಳುಗಳನ್ನು ಬೆಳೆಯುತ್ತಿದ್ದನು. ಆ ಊರಿನಲ್ಲಿ ನಡೆಯುತ್ತಿದ್ದ ಕಾಳುಗಳ ಪ್ರದರ್ಶನದಲ್ಲಿ ಪ್ರತಿ ವರ್ಷ ಅವನು ಬೆಳೆದ ಕಾಳುಗಳಿಗೆ ಬಹುಮಾನಗಳು ಲಭಿಸುತ್ತಿದ್ದವು.

ಹೀಗಿರುವಾಗ ಒಂದು ಸಾರಿ ಒಬ್ಬ ವ್ಯಕ್ತಿ ಆ ರೈತನು ತನ್ನ ಕಾಳುಗಳನ್ನು ಅಕ್ಕಪಕ್ಕದ ಜಮೀನಿನ ರೈತರುಗಳೊಂದಿಗೆ ಹಂಚಿಕೊಳ್ಳುತ್ತಿದ್ದನ್ನು ನೋಡಿ ಕುತೂಹಲದಿಂದ ಆತನನ್ನು ಕೇಳಿದನು. ಸ್ಪರ್ಧೆಯಲ್ಲಿ ನಿನ್ನ ನೆರೆ ಹೊರೆಯ ರೈತರೂ ಕೂಡ ಪಾಲ್ಗೊಳ್ಳುತ್ತಿರುವಾಗ ಅದು ಹೇಗೆ ನೀನು ನಿನ್ನ ಕಾಳುಗಳನ್ನು ಅವರೊಂದಿಗೆ ಹಂಚಿಕೊಳ್ಳುತ್ತಿ? ಎಂದು ವರದಿಗಾರನು ಆ ರೈತನನ್ನು ಕೇಳಿದನು.

ನಿನಗೆ ಗೊತ್ತಿಲ್ಲವೇ? ಬೀಸುವ ಗಾಳಿಯಿಂದ ನೆರೆ ಹೊರೆಯ ಜಮೀನಿನ ಕಾಳುಗಳು ನನ್ನ ಹೊಲಕ್ಕೂ ನನ್ನ ಹೊಲದ ಕಾಳುಗಳು ಅಕ್ಕಪಕ್ಕದ ಜಮೀನಿಗು ಹಾರಿ ಹೋಗಿ ಬೀಳುವುದಿಲ್ಲವೇ? ಅವರು ಕಳಪೆ ದರ್ಜೆಯ ಕಾಳುಗಳನ್ನು ಬೆಳೆದರೆ ನಾನೂ ಕೂಡ ಅದನ್ನೇ ಬೆಳೆದಂತಾಗುವುದಿಲ್ಲವೇ? ನಾನು ಅತ್ಯುತ್ತಮ ಕಾಳುಗಳನ್ನು ಬೆಳೆಯಬೇಕಾದರೆ ನೆರೆ ಹೊರೆಯವರು ಸಹ ಅಷ್ಟೇ ಅತ್ಯುತ್ತಮವಾದುದನ್ನೇ ಬೆಳೆಯಬೇಕಾಗುತ್ತದೆ. ಹೀಗೆ ರೈತನು ಸೂಕ್ಷ್ಮವಾಗಿ ತನ್ನ ಅಂತರಂಗವನ್ನು ತೆರೆದಿಟ್ಟನು. ಎಲ್ಲಿಯವರೆಗೆ ನೆರೆ ಹೊರೆಯವರ ಫಸಲು ಉತ್ತಮವಾಗಿರುವುದಿಲ್ಲವೋ ಅಲ್ಲಿಯವರೆಗೆ ತನ್ನದೂ ಸಹ ಕಳಪೆಯೇ. ಹಾಗೆಯೇ ಈ ನೀತಿ ಜೀವನಕ್ರಮಕ್ಕೆ ಸಹ ಹೊಂದಿಕೆಯಾಗುತ್ತದೆ.

ಯಾರು ಶಾಂತಿ ಮತ್ತು ಸಹಬಾಳ್ವೆಯ ಜೀವನವನ್ನು ಇಚ್ಛಿಸುತ್ತಾರೋ ಅವರು ನೆರೆ ಹೊರೆಯವರಿಗೂ ಮತ್ತು ಸಹೋದ್ಯೋಗಿಗಳಿಗೂ ಸಹಾಯ ಹಸ್ತವನ್ನು ನೀಡಬೇಕಾಗುತ್ತದೆ. ಯಾರು ತಮ್ಮ ಬದುಕು ಹಸನಾಗಿರಬೇಕೆಂದು ಬಯಸುವರೋ ಅವರು ತಮ್ಮ ಸುತ್ತಮುತ್ತಲಿನವರೂ ನೆಮ್ಮದಿಯಿಂದಿರಬೇಕೆಂದು ಅಪೇಕ್ಷಿಸಬೇಕಾಗುತ್ತದೆ. ಒಬ್ಬರ ಬದುಕು ಎಷ್ಟು ದಿನ ಬಾಳಿದರೆಂಬುದು ಮುಖ್ಯವಲ್ಲ. ಎಷ್ಟು ಜನರೊಟ್ಟಿಗೆ ಬಾಳ್ವೆ ನಡೆಸಿದರೆನ್ನುವುದು ಮುಖ್ಯ.

**ನೀತಿ: ಯಶಸ್ಸು ಎಂಬುದನ್ನು ಒಬ್ಬನಿಂದ ಸಾಧಿಸಲಾಗುವುದಿಲ್ಲ, ಅದು ಸಾಂಘಿಕ ಯತ್ನದಿಂದ ಮಾತ್ರ ಸಾಧ್ಯ.ಆದುದರಿಂದ ಎಲ್ಲ ಒಳ್ಳೆಯ ಅಭ್ಯಾಸಗಳನ್ನು, ಹೊಸ ಯೋಚನೆಗಳನ್ನು, ಜ್ಞಾನವನ್ನು ಮಿತ್ರರ ಜೊತೆ ಹಂಚಿಕೊಳ್ಳಿ.**

# ಕೊಲೆಸ್ಟ್ರಾಲ್ (ಕೊಬ್ಬು)

| ಪುನೀತ್ ಎಂ.ಜಿ.

ಮೂಲಲೇಖನ : ಡಾ.ಶಂಕರ್ ಪಾಂಡಿಪರ್ಯ




ಕೊಲೆಸ್ಟರಾಲ್ ಅಥವಾ ಕೊಬ್ಬು ಎನ್ನುವುದು ಪ್ರಾಣಿಗಳ ಜೀವಕೋಶಗಳ ಪದರಗಳಲ್ಲಿರುವ ಜೀವರಾಸಾಯನಿಕ ಕ್ರಿಯೆಯಿಂದ ಉತ್ಪನ್ನವಾದ ಮೇಣದಂತಹ ಜೈವಿಕವಸ್ತುವಾಗಿದ್ದು, ಇದು ರಕ್ತದೊಳಗಿನ ಜೀವದ್ರವ್ಯದಲ್ಲಿ ಸಾಗಿಸಲ್ಪಡುತ್ತದೆ.

ಇದು ಸಸ್ತನಿ ಜಾತಿಯ ಪ್ರಾಣಿಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗುವ ದೈಹಿಕ ರಚನಾತ್ಮಕ ಅಂಶವಾಗಿದ್ದು, ಒಳಚರ್ಮದ ಭೇದ್ಯತೆಗೆ ಮತ್ತು ಸ್ರಾವತೆಯನ್ನು ಸರಿಯಾಗಿ ಕಾರ್ಯಗೊಳಿಸಲು ಅಗತ್ಯವಾಗಿದೆ. ಇದರೊಂದಿಗೆ ಪಿತ್ತರಸ ಆಮ್ಲ, ಸ್ಟೆರಾಯ್ಡ್ ಹಾರ್ಮೋನ್ ಮತ್ತು ಹಲವು ಕೊಬ್ಬಿನಲ್ಲಿ ಕರಗುವ ವಿಟಮಿನ್ ತಯಾರಿಕೆಯಲ್ಲಿ ಪ್ರಮುಖ ಅಂಶವಾಗಿ ಬಳಸಲ್ಪಡುತ್ತದೆ. ಕೊಲೆಸ್ಟ್ರಾಲ್ ದೇಹದ ಜೀವಕೋಶಗಳ ಪೊರೆಯನ್ನು ರಚಿಸಲು, ಹಾರ್ಮೋನುಗಳಾದ ಈಸ್ಟ್ರೋಜೆನ್ ಮತ್ತು ಟೆಸ್ಟೋಸ್ಟೆರಾನ್‌ಗಳ ಉತ್ಪಾದನೆಗೆ ಅತ್ಯವಶ್ಯಕವಾಗಿರುವ ರಾಸಾಯನಿಕ ಸಂಯುಕ್ತ. ನಮ್ಮ ರಕ್ತದಲ್ಲಿನ ಕೊಲೆಸ್ಟ್ರಾಲ್‌ನ್ನು ಯಕೃತ್ತು ನಿಯಂತ್ರಿಸುತ್ತದೆ. ಆಹಾರ ಸೇವನೆಯ ನಂತರ, ಅದರಲ್ಲಿನ ಕೊಲೆಸ್ಟ್ರಾಲ್ ಸಣ್ಣ ಕರುಳಿನಿಂದ ಹೀರಲ್ಪಡುತ್ತದೆ ಹಾಗೂ ಅದು ಯಕೃತ್ತಿನಲ್ಲಿ ಸಂಸ್ಕರಣೆಗೊಂಡು, ಅಲ್ಲಿಯೇ ಶೇಖರಣೆಯಾಗುತ್ತದೆ. ದೇಹಕ್ಕೆ ಅಗತ್ಯವೆನಿಸಿದಾಗ ಯಕೃತ್ತಿನಿಂದ ಪೂರೈಸಲ್ಪಡುತ್ತದೆ. ಅತಿಯಾದ ಕೊಬ್ಬು ದೇಹದಲ್ಲಿದ್ದಾಗ ಅದು ರಕ್ತನಾಳಗಳ ಒಳಪದರಗಳಲ್ಲಿ ಶೇಖರಣೆಗೊಂಡು ಗಟ್ಟಿಯಾಗಿ ರಕ್ತದ ಸರಾಗ ಚಲನೆಗೆ ಅಡಚಣೆ ಉಂಟುಮಾಡುತ್ತದೆ. ಹೃದಯಕ್ಕೆ ರಕ್ತ ಪೂರೈಸುವ ನಾಳಗಳನ್ನು ಕೊಬ್ಬು ತುಂಬಿಕೊಂಡಾಗ ಹೃದಯಾಘಾತವಾಗುವ ಸಾಧ್ಯತೆಗಳಿರುತ್ತವೆ.

## ಕೊಬ್ಬು ಕರಗಿಸಲು ಚಿಕಿತ್ಸಾ ವಿಧಾನ: ಆಹಾರ ಚಿಕಿತ್ಸೆ

1–ನಿತ್ಯ ಮೂರ್ನಾಲ್ಕು ಬಾದಾಮಿಯನ್ನು ನೆನೆಸಿ, ಸ್ವಲ್ಪ ಸುಟ್ಟು ಅಥವಾ ಹಾಗೆಯೇ ತಿಂದಲ್ಲಿ ಅದು ಕೆಟ್ಟಕೊಬ್ಬನ್ನು ಸಂಪೂರ್ಣ ಹತೋಟಿಯಲ್ಲಿಡುತ್ತದೆ.

2–ದಿನಕ್ಕೆ 50 ಕಡಲೇಬೀಜ ಸೇವನೆ ಮಾಡಿದಲ್ಲಿ ದೇಹಕ್ಕೆ ಅತ್ಯುಪಯುಕ್ತ. ಇದರಿಂದಾಗಿ ಕೆಟ್ಟಕೊಬ್ಬು ಕಡಿಮೆಯಾಗಿ ದೇಹಕ್ಕೆ ಪ್ರೋಟಿನ್ ಲಭ್ಯವಾಗುತ್ತದೆ.

3–ಪಿಸ್ತಾ ಕೂಡ ಒಳ್ಳೆಯ ಕೊಬ್ಬನ್ನು ಹೆಚ್ಚಿಸುತ್ತದೆ.

4–ಕೆಟ್ಟ ಕೊಬ್ಬಿರುವವರು ದಿನಕ್ಕೆ ಒಂದು ಪೂರ್ಣ ಸಂಸ್ಕರಿಸಿದ ಅಕ್ರೋಟ(ವಾಲ್ನಟ್)ನ್ನು ತಾಜಾವಾಗಿ ಒಡೆದು ತಿನ್ನಬೇಕು.










5–ನಿತ್ಯ ಎರಡರಿಂದ ಮೂರು ಹಸಿ ಬೆಳ್ಳುಳ್ಳಿ ಸೇವನೆ ಕೆಟ್ಟ ಕೊಬ್ಬು ಕರಗಿಸುವಲ್ಲಿ ಸಹಾಯ ಮಾಡುತ್ತದೆ. ಇದರಿಂದ ಮಧುಮೇಹ, ಅಧಿಕ ರಕ್ತದೊತ್ತಡದ ನಿಯಂತ್ರಣಕ್ಕೆ ಬರುತ್ತದೆ.

7–ಓಟ್ಸ್‌ನಲ್ಲಿ ಕರಗುವಂತಹ ನಾರಿನಂಶ ಹೇರಳವಾಗಿರುವುದರಿಂದ ಇದರ ಸೇವನೆ ಉತ್ತಮ, ಇದು ಮಲದ ಮೂಲಕ ಕೊಲೆಸ್ಟ್ರಾಲ್ (ಬೈಲ್ ಲವಣ) ವಿಸರ್ಜಿಸುವಲ್ಲಿ ಸಹಾಯ ಮಾಡಿ ಕೊಬ್ಬಿನ ನಿಯಂತ್ರಣದಲ್ಲಿ ಭಾಗಿಯಾಗುತ್ತದೆ.

8–ಮೆಂತ್ಯ ಸೊಪ್ಪು ನಾರಿನಂಶ ಪೂರೈಸಿ ಕೊಬ್ಬು ಕರಗಿಸುವಲ್ಲಿ ಸಹಾಯು ಮಾಡುತ್ತದೆ. ಇದನ್ನು ಹಸಿಯಾಗಿಯೇ ಸೇವಿಸಬೇಕು.

9–ಪ್ರತಿದಿನ ಒಂದರಂತೆ 90 ದಿನ ಸೀಬೆಹಣ್ಣು ಸೇವನೆ ಮಾಡುವುದರಿಂದ ಶೇ.20ರಷ್ಟು ಕೆಟ್ಟಕೊಬ್ಬು ಕಡಿಮೆಯಾಗುತ್ತದೆ. ಇದು ವೆಜ್ಞಾನಿಕ ಸಂಶೊಧನೆ ಮೂಲಕ ಸಾಬೀತಾಗಿದೆ.

## ಮನೆಮದ್ದು

1–ಅರ್ಧ ಚಮಚದಷ್ಟು ಕಪ್ಪು ಜೀರಿಗೆಯನ್ನು ಲಘುವಾಗಿ ಜಜ್ಜಿಕೊಳ್ಳಿ, ಅದರೊಟ್ಟಿಗೆ ಒಂದು ಚಮಚದಷ್ಟು ಕೊತ್ತಂಬರಿಬೀಜ ಹಾಕಿ ಮತ್ತೆ ಜಜ್ಜಿಕೊಳ್ಳಿ, ಇವೆರಡರ ಒಂದು ಚಮಚ ಮಿಶ್ರಣವನ್ನು ಒಂದು ಲೋಟ ಶುದ್ಧ ಕುದಿಯುವ ನೀರಿಗೆ ಹಾಕಿರಿ. ನಂತರ ಒಂದು ಚಿಟಿಕೆ ಅರಿಶಿಣ ಬೆರೆಸಿ, ಸ್ವಲ್ಪ ಹೊತ್ತು ಕುದಿಸಿ ನಂತರ ಸೋಸಿಕೊಳ್ಳಿ. ಮಧುಮೇಹಿಗಳಲ್ಲದವರು ರುಚಿಗೆ ಕೆಂಪುಕಲ್ಲು ಸಕ್ಕರೆ ಅಥವಾ ಜೇನುತುಪ್ಪ ಸೇರಿಸಿ ಸೇವಿಸಿರಿ.

2– ಒಂದು ಲೋಟ ಸಿಹಿಮಜ್ಜಿಗೆಗೆ ಕೊತ್ತಂಬರಿ ಸೊಪ್ಪು, ಅರ್ಧ ಈರುಳ್ಳಿ, 3–4 ಬೆಳ್ಳುಳ್ಳಿ ಇಲುಕುಗಳನ್ನು ರುಬ್ಬಿಕೊಂಡು ಹಾಕಿ ಸೇವಿಸಬೇಕು. ಬೇಕಿದ್ದಲ್ಲಿ ಸೈಂಧವ ಲವಣ ಸೇರಿಸಿ. ಇದು ಕೊಬ್ಬನ್ನು ಕಡಿಮೆ ಮಾಡುತ್ತದೆ ಹಾಗೂ ಕ್ಯಾನ್ಸರ್ ಕೂಡಾ ತಡೆಗಟ್ಟುತ್ತದೆ.


3– ಒಂದು ಪಾತ್ರೆಯಲ್ಲಿ ಶುದ್ಧ ಕುದಿಯುವ ನೀರಿಗೆ ಅರ್ಧ ಚಮಚದಷ್ಟು ಬೆಟ್ಟದ ನೆಲ್ಲಿಕಾಯಿ ಚೂರ್ಣ, ಒಂದು ಚಿಟಿಕೆ ಅರಿಶಿಣ ಹಾಕಿ ಬೆರೆಸಿರಿ. ಸ್ವಲ್ಪ ಆರಿದ ನಂತರ ತಾಜಾ ಇರುವಾಗಲೇ ಸೇವಿಸಿ. 90 ದಿನಗಳವರೆಗೆ ದಿನನಿತ್ಯ ಈ ವಿಶೇಷ ಜಲವನ್ನು ಸೇವಿಸಿದಲ್ಲಿ ರಕ್ತದಲ್ಲಿನ ಕೊಬ್ಬಿನಂಶವು ಕಡಿಮೆಯಾಗಿ ಹತೋಟಿಯಲ್ಲಿರುತ್ತದೆ. ಮಧುಮೇಹಿಗಳಲ್ಲದವರು ಅರ್ಧ ಚಮಚದಷ್ಟು ಜೇನುತುಪ್ಪ ಹಾಕಿಕೊಳ್ಳಿ.

## ವ್ಯಾಯಾಮ ಚಿಕಿತ್ಸೆ

1–ಪ್ರತಿದಿನ ಸೂರ್ಯ ನಮಸ್ಕಾರವನ್ನು ವೇಗವಾಗಿ ಮಾಡಬೇಕು.

2– ಓಡುವುದು, ವೇಗದ ಕಾಲುನಡಿಗೆ ಕೂಡ ದೇಹದ ಅನಗತ್ಯವಾದ ಕೊಬ್ಬಿನ ಸಂಗ್ರಹವನ್ನು ಕರಗಿಸಿ, ಆರೋಗ್ಯಕರ ಕೊಬ್ಬನ್ನು ಮಾತ್ರ ಕಾಪಾಡಿಕೊಂಡು ಹೋಗುತ್ತದೆ.

**ಚಿಟಕಿ ಆರೋಗ್ಯ :** ಬೆಳಗ್ಗೆ ಖಾಲಿಹೊಟ್ಟೆಯಲ್ಲಿ ದೊಡ್ಡಲೋಟ ಬಿಸಿನೀರಿಗೆ ಎರಡು ಅಥವಾ ಮೂರು ಟೀ ಚಮಚದಷ್ಟು ಜೇನುತುಪ್ಪವನ್ನು ಸೇರಿಸಿ ಕುಡಿಯುವುದರಿಂದ ಮಲಬದ್ಧತೆ ನಿವಾರಣೆಯಾಗುತ್ತದೆ.



# 111 ಅಡಿ ಎತ್ತರದ ಬಸವ ಪುತ್ಥಳಿ

### ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ

ಬೆಂಗಳೂರಿನಿಂದ ಮೈಸೂರು ಹೆದ್ದಾರಿಯ ಮೇಲೆ 20 ಕಿಲೋಮೀಟರ್ ದೂರದಲ್ಲಿ ವಿಶ್ವಕಲ್ಯಾಣ ಮಿಷನ್ ಒಡೆತನದ 'ಬಸವ ಗಂಗೋತ್ರಿ' ಎಂಬ ಆಶ್ರಮವಿದೆ. ಇಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರಿನ ಜ್ಞಾನಪೀಠವೂ ಸ್ಥಾಪನೆಯಾಗಿ ಇದಕ್ಕೆ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಇಲ್ಲಿ ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ತೆಂಗಿನ ತೋಟದೊಡನೆ ಸುಂದರವಾದ ಪರಿಸರ ಹೊಂದಿರುವ ಬಸವ ಗಂಗೋತ್ರಿಯಲ್ಲಿ ಗುರು ಬಸವಣ್ಣನವರ ಬೃಹತ್ ಪುತ್ಥಳಿ ಆಗಬೇಕೆಂದು ವಿಶ್ವಕಲ್ಯಾಣ ಮಿಷನ್ ಚೇರ್ಮನ್ನರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೇಕ್ಷಿಸಿದ್ದರು. ಆದ್ದರಿಂದ 111 ಅಡಿ ಬೃಹತ್ ಪುತ್ಥಳಿಗೆ ಶಂಕುಸ್ಥಾಪನೆ ಸಹ ಮಾಡಲಾಗಿದೆ. ಮಟ್ಟಸವಾದ ಬಯಲಿನಲ್ಲಿ ಮಾಡಬೇಕಾಗಿರುವುದರಿಂದ 6 ಮೆಟ್ಟಲಿನ 30 ಅಡಿ ಎತ್ತರದ ಪೀಠವನ್ನು ಮಾಡಿ ಅದರ ಮೇಲೆ ಇಷ್ಟಲಿಂಗ ಪೂಜೆ-ತ್ರಾಟಕ ಯೋಗದಲ್ಲಿ ನಿರತ ಗುರು ಬಸವಣ್ಣನವರನ್ನು ರೂಪಿಸಲಾಗುವುದು.

ಪೀಠದ ಕೆಳಭಾಗದಲ್ಲಿ ಒಂದು ಧ್ಯಾನ ಮಂಟಪವನ್ನು ಮತ್ತು ಸಪ್ತ ಗಣಾಧೀಶರ ಮೂರ್ತಿಗಳು ಸಹಿತವಾದ ಶರಣ ಮಂಟಪವನ್ನು- ಹೀಗೆ 3 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಷಡ್‌ಗಣಾಧೀಶರಾದ ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು, ಚಿನ್ಮಯಜ್ಞಾನಿ ಚನ್ನಬಸವಣ್ಣ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರ ಗವಿಗಳನ್ನು ಗೋಳಾಕಾರದಲ್ಲಿ ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಶರಣೋದ್ಯಾನವನ್ನು ನಿರ್ಮಿಸಲಾಗುವುದು. ಧರ್ಮಪಿತ ಬಸವಣ್ಣನವರ ತತ್ತ್ವಗಳ ಪ್ರಚಾರ ಮಾಡಲು ಬೃಹತ್ ಸ್ಮಾರಕಗಳು ಸಾಧಕವಾಗುತ್ತವೆಂಬ ಮನೀಷೆಯಿಂದ ಈ ಬೃಹತ್ ಪುತ್ಥಳಿಯನ್ನು ನಿರ್ಮಿಸಲಾಗುತ್ತಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಅನಾಥಾಲಯ, ವೃದ್ಧಾಶ್ರಮಗಳಿಗೆ ಸ್ವತಂತ್ರವಾದ ಕಟ್ಟಡ ಆಗಬೇಕಾಗಿದೆ. ಆದ್ದರಿಂದ ಈ ಎಲ್ಲ ಕೆಲಸಗಳಿಗೆ ಉದಾರವಾದ ಧನಸಹಾಯದ ಅಗತ್ಯವಿದೆ.

ಬಸವ ಗಂಗೋತ್ರಿಯ ಕೆಲಸಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ನಡೆಯುತ್ತಿದ್ದು ಇದಕ್ಕೆ 80ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯವಿದೆ.

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:**

**ಪೂಜ್ಯ ಶ್ರೀ ಜಗದ್ಗುರು ಡಾ.ಮಾತೆ ಮಹಾದೇವಿ ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560 010. 9448137508, 9449588669**

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

# ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ (ರಿ.)



1. ಅಕ್ಕನಾಗಲಾಂಬಿಕಾ ಅನಾಥಾಲಯ ಬಸವ ಕಲ್ಯಾಣ
2. ಪೂಜ್ಯಶ್ರೀ ಸ್ವಾಮಿ ಲಿಂಗಾನಂದ ಅನಾಥಾಲಯ ಬಸವ ಕಲ್ಯಾಣ
3. ಮುಕ್ತಾಯಕ್ಕ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಬಸವ ಕಲ್ಯಾಣ
4. ಕಲ್ಯಾಣಮ್ಮ (ಅನಾಥಾಲಯ)ನಿರ್ಗತಿಕ ಮಕ್ಕಳ ಕುಟೀರ, ಬಸವ ಮಂಟಪ, ಬೀದರ್
5. ನೀಲಾಂಬಿಕಾ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿನಿಲಯ, ಬಸವ ಮಂಟಪ, ಬೀದರ್

ತಂದೆ ಅಥವಾ ತಾಯಿಯಿಲ್ಲದ, ತಂದೆ/ ತಾಯಿ ಇಬ್ಬರು ಇಲ್ಲದ, ಸಂಬಂಧಿಕರ ಆಶ್ರಯದಲ್ಲಿ ಬೆಳೆಯುತ್ತಿರುವ, ಅನಾಥ, ವಿದ್ಯಾಭ್ಯಾಸದಲ್ಲಿ ಆಸಕ್ತಿವುಳ್ಳ, ಬಡವ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಇನ್ನಿತರ ಸೌಲಭ್ಯ ಲಭ್ಯ.

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್(ರಿ), ಬೆಂಗಳೂರು, ಬಸವಕಲ್ಯಾಣ ಇವರ ಆಶ್ರಯದಲ್ಲಿ ನಡೆಸಲಾಗುತ್ತಿರುವ ಅನಾಥಾಲಯ ಹಾಗೂ ವಸತಿ ನಿಲಯಕ್ಕೆ ಗಂಡು/ ಹೆಣ್ಣು ಮಕ್ಕಳಿಂದ

## ಪ್ರವೇಶಕ್ಕೆ ಅರ್ಜಿ ಆಹ್ವಾನ

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ಪೂಜ್ಯಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿ
9448732456

ಪೂಜ್ಯಶ್ರೀ ಸದ್ಗುರು ಬಸವ ಪ್ರಭು ಸ್ವಾಮೀಜಿ
9480497346

ಪೂಜ್ಯಶ್ರೀ ನಿಶ್ಚಲಾಂಬ ಮಾತಾಜಿ
9883502141

ಕಚೇರಿ : ಬಸವ ಮಂಟಪ, ಬೀದರ್.
08482-225845

ಶಾಂತಾದೇವಿ. ಎಸ್. ಬಿರಾದಾರ್, ಹಾರೂಗೇರಿ ಬೀದರ್
ಅನಾಥಾಲಯ ಆಯ್ಕೆ ಕಾರ್ಯದರ್ಶಿ
9449262824 / 9591637102

Registered with Registrar oF News Papers in India, New Delhi No.19988/70 Postal Registration (SSP os BG-West Dn) No.KA/BGW-50/WPP-17/2015-17, Linced to Post the Printed Magazine without Prepayment (WPP-17). Posted at Bengaluru PSO, Mysuru Road (Bg-560026) on 3rd, 10th, 20th and 23rd of this month. Pages 32+4